Azim Premji Foundation

# IFA TALKIES

EXPLORING THE VOICES UNHEARD

OCTOBER 2017 ಸಂಚಿಕೆ-11 ISSUE-XI



"You must not lose faith in humanity. Humanity is like an ocean; if a few drops of the ocean are dirty, the ocean does not become dirty"

"If we want to reach real peace in this world, we should start educating children"

# Contents


ಮಹಾಸತಿ ಸಾವಿತ್ರಿ -ಪೆರಿ ... 3

ಬಿಂದುಗಳು -ರಕ್ಷಿತ್ ಅರುಣ್ ... 5

ಅದೇ ಸದ್ದು -ಶಿವಕುಮಾರ ಸಿ ಎಸ್ ... 6

ಅವಳು ಹೇಳಿದ ಕಥೆ 1 –ರಕ್ಷಿತ್ ಅರುಣ್ ... 7

Children and their reading habits -Jyothi Koppal ... 8

A conversation with a girl in a bus –Anil Kottur ... 10

ತರಗತಿಯಲ್ಲಿ ಭಾಷೆಯ ಸವಾಲುಗಳು! - ಮಂಜುನಾಥ್ ಎ.ಆರ್ ... 12

A Visit to Nana Layja -Krithi Satish Koppal ... 15

ಮಾ(ನ)ಸದ ಪ್ರೀತಿ - ಅವಿನಾಶ್ ಹೊಸಪೇಟೆ ... 16

ತಮಂಧದ ಕೇಡು ಮತ್ತು ಬುದ್ಧ ಹಚ್ಚಿದ ಪ್ರಣತಿ -ಪುಷ್ಪಾ ಪಿ. ಕಾಮತ್ ... 17

ತೊತ್ತೋಚಾನ್: ಒಂದು ಚಿಂತನೆ -ರಾಘವೇಂದ್ರ ಬಿ.ಟಿ ... 19

ಮುಖವಾಡ- ಭಾವನೆಗಳ ಬೆನ್ನೇರಿ... - ಶ್ರೀನಿವಾಸ ರಾವ್ ಎಸ್.ಪಿ ಕಲಬುರಗಿ ... 21

Reflections- Malavika Rajnarayan Yadgir ... 22

Art by: Rajani Bhat Ballari ... 23

Art by: Gargi N Shabaray ... 24




## ಮಹಾಸತಿ ಸಾವಿತ್ರಿ -ಪೆರಿ

ಸಾವಿತ್ರಿ- ಆ ಹೆಸರು ಕೇಳುವಾಗಲೇ ಮೈ ಜುಂ ಎನ್ನುತ್ತದೆ. ಆಕೆ ತನ್ನ ಗಂಡನನ್ನು ಎಷ್ಟು ಪ್ರೀತಿಸಿದಳೆಂದರೆ, ಯಮ ಬಂದು ತನ್ನ ಗಂಡನ ಪ್ರಾಣವನ್ನು ಕೊಂಡುಹೋಗುವಾಗ, ಅವನ ದಾರಿಗೆ ಅಡ್ಡಕಟ್ಟಿ ಆತನೊಂದಿಗೆ ಸೆಣಸಾಡಿ ಯಾರಿಗೂ ಕನಿಕರ ತೋರಿಸದೆ, ತನ್ನ ಕರ್ತವ್ಯವನ್ನು ಚಾಚೂ ತಪ್ಪದೆ ಮಾಡುವ, ಯಾವುದೇ ಕಾರಣಕ್ಕೆ ಇಟ್ಟ ಹೆಜ್ಜೆ ಹಿಂದೆ ತೆಗೆಯದ ಆ ಯಮನನ್ನೇ ಸೋಲಿಸಿದಳು. ಅದು ತನ್ನ ಗಂಡನ ಮೇಲಿನ ಪ್ರೀತಿಯಿಂದ, ಅಬ್ಬಾ ಎಂತಹ ಪ್ರೀತಿ ಅದು! ಆ ಪ್ರೀತಿಯಲ್ಲಿ ಎಂತಹ ಶಕ್ತಿಯಿದೆ. ಯಮನ ಕೈಯಿಂದ ಪ್ರಾಣವನ್ನು ಕಿತ್ತು ಹಿಂದೆತಂದ ಆ ಕ್ಷಣ, ಬಹುಶಃ ಸಾವಿತ್ರಿಗೆ ಬೇರೆ ಯಾವುದು ಮನಸ್ಸಿನಲ್ಲಿ ಇರಲಿಲ್ಲ. ಇದ್ದದ್ದು ಒಂದೇ ಗುರಿ, ಅದು ಗಂಡನನ್ನು ಉಳಿಸಿಕೊಳ್ಳಬೇಕು ಎಂಬುದು. ಅದಕ್ಕೆ ಯಾರೊಂದಿಗೂ ಸಾವಿತ್ರಿ ಹೋರಾಡಲು ಸಿದ್ಧವಾದಳು, ಹೋರಾಡಿದಳು. ಯಮನ ಬಾಯಿಯನ್ನೇ ಮುಚ್ಚಿಸಿ ತನ್ನ ಗಂಡನ ಪ್ರಾಣವನ್ನು ವಾಪಾಸು ಪಡೆದಳು. ಈ ಸಾವಿತ್ರಿಯ ಮುಂದೆ ನಮಗೆ ಯಮನೇ ತತ್ತರಿಸಿ ಹೋಗುವ ಹಾಗೇ ಕಾಣುತ್ತಾನೆ. ಪ್ರೀತಿ, ಪ್ರೇಮ, ಮಾನವೀಯತೆಯೇ ಇಲ್ಲದ ಆ ಹೃದಯದಲ್ಲಿ ಕರುಣೆ, ಪ್ರೀತಿ, ಪ್ರೇಮವನ್ನು ಬಿತ್ತಿ ಯಮನನ್ನೇ ಮಾನವೀಯವಾಗಿ ಮಾಡಿದ ಹಾಗೇ ಕಾಣುತ್ತಾಳೆ. ಈ ದಿಟ್ಟ ಹೆಂಗಸು ಸತ್ಯವಾನ್ ಸಾವಿತ್ರಿ! ಮೆಚ್ಚಬೇಕಾದದ್ದು ಆಕೆಯ ದಿಟ್ಟತನಕ್ಕೆ, ಬೆಟ್ಟದಂತಹ ಆ ಧೈರ್ಯಕ್ಕೆ, ಆಕೆಯ ಅದಮ್ಯ ಶಕ್ತಿಗೆ!

*ಸಾವಿತ್ರಿ* ಈ ಹೆಸರು ಕೇಳುವಾಗಲೇ ನಮಗೆ ಅದ್ಭುತವಾದ ಧೈರ್ಯ ಬರುತ್ತದೆ. *ಸಾವಿತ್ರಿ ಬಾಯಿ ಫುಲೆ* ಧೈರ್ಯಕ್ಕೆ ಇನ್ನೊಂದು ಹೆಸರು. 1831ರಲ್ಲಿ ಹುಟ್ಟಿದ ಈ ಹೆಣ್ಣು ಮಗು ಏನೇನು ಮಾಡಿಲ್ಲ? 9ನೇ ವಯಸ್ಸಿನಲ್ಲಿ *ಜ್ಯೋತಿ ಬಾ*ರವರನ್ನು ಮದುವೆ ಆಗಿ ಜ್ಯೋತಿ ಬಾ ಫುಲೆಗೆ ಪ್ರೇರಣೆ, ಧೈರ್ಯ ಹಾಗೂ ಬೆಂಬಲ ಕೊಡುವ ಸಮರ್ಪಕ ಜೊತೆಗಾರ್ತಿಯಾಗಿ ನಿಲ್ಲುತ್ತಾಳೆ. *ಜ್ಯೋತಿ ಬಾ*ರವರಿಗೆ ಅದ್ಭುತ ಸಂಗಾತಿಯಾಗಿ ಜೀವನ ನಡೆಸುತ್ತಾಳೆ. ಈ ಸಾವಿತ್ರಿ ಬಾಯಿ ಮಾಡಿದ ಕೆಲಸ ನೋಡಿದ್ರೆ ಯಾವುದೇ ಒಂದು ವ್ಯಕ್ತಿ ಅವರಿಂದ ಪ್ರಭಾವಿತನಾಗದೇ ಇರಲು ಸಾಧ್ಯವೇ ಇಲ್ಲ ಅನ್ನಿಸುತ್ತದೆ. ಶಿಕ್ಷಣದ ಕ್ಷೇತ್ರದಲ್ಲಿ ಅದರಲ್ಲೂ ಕಡೆಗಣಿಸಲ್ಪಟ್ಟಿದ್ದ ಸ್ತ್ರೀ ಶಿಕ್ಷಣ ಕ್ಷೇತ್ರದಲ್ಲಿ, ಆ ಕಾಲದಲ್ಲಿ ಅಸಾಧ್ಯವೆಂದು ಕಾಣುವ ಅದ್ಭುತ ಸಾಧನೆಗೈಯುತ್ತಾರೆ! ಹೆಣ್ಣು ಮಕ್ಕಳಿಗೆ ಹುರುಪಿನಿಂದ ಜೀವನವನ್ನು ಎದುರಿಸುವ, ಈ ಸಮಾಜವನ್ನು ಬದಲಾಯಿಸುವ ಪಾಠ ಬೋಧಿಸುತ್ತಾಳೆ! ಸಾವಿತ್ರಿ ಬಾಯಿ ಶಿಕ್ಷಣದ ಮೂಲಕ ಕೆಲಸ ಪ್ರಾರಂಭಿಸಿ, ಮಹಿಳಾ ಸಬಲೀಕರಣದ ಎಲ್ಲಾ ಅಂಶಗಳಲ್ಲೂ ಕೆಲಸ ಪ್ರಾರಂಭಿಸುತ್ತಾಳೆ. ಅಂತರ್‌ಜಾತಿ ವಿವಾಹ, ವಿಧವೆಯರಿಗೆ ಆಶ್ರಯ, ಮಹಿಳಾ ವಿರೋಧಿ ಆಚರಣೆಗಳ ವಿರುದ್ಧ ಪ್ರತಿಭಟನೆ . . . . ಹೀಗೆ ಒಂದೇ, ಎರಡೇ? ಮಹಿಳಾ ಸಬಲೀಕರಣಕ್ಕೆ ಸಮಗ್ರವಾಗಿ ಹಾಗೂ ಸಮರ್ಪಕವಾಗಿ ಕೆಲಸ ಮಾಡಿದ ಮಹಿಳೆ *ಸಾವಿತ್ರಿ ಬಾಯಿ ಫುಲೆ.*

*ಸಾವಿತ್ರಿ ಬಾಯಿ* ನಡೆಸುವ ಶಾಲೆ ಹೇಗಿತ್ತೆಂದರೆ, ಇವಳ ಶಾಲೆಯ ಹೆಣ್ಣು ಮಕ್ಕಳು, ಪಬ್ಲಿಕ್ ಶಾಲೆಯ ಗಂಡು ಮಕ್ಕಳಿಗಿಂತ ಹೆಚ್ಚಿನ ಸಾಧನೆ ಮಾಡುತ್ತಾರೆ. ಅದನ್ನು ನಿಲ್ಲಿಸಬೇಕೆಂದು ಶಿಕ್ಷಣದ ಬೋರ್ಡ್‌ನವರೆಲ್ಲಾ ಮಾತುಕತೆ ನಡೆಸುತ್ತಾರೆ. ಈ ಶಾಲೆಗಳನ್ನು ನಿಲ್ಲಿಸುವ ಪ್ರಯತ್ನ ಕೂಡ ನಡೆಯುತ್ತದೆ. ಮಹಿಳೆಯರಿಗೆ, ಅದರಲ್ಲೂ ಕಷ್ಟದಲ್ಲಿರುವ ಮಹಿಳೆಯರಿಗೆ, ವಿಧವೆಯರಿಗೆ, ಶೋಷಿಸಲ್ಪಡುವ ಮಹಿಳೆಯರಿಗೆ, ದೀನ ದಲಿತ ಮಹಿಳೆಯರಿಗೆ, ಸಾವಿತ್ರಿ ಬಾಯಿ ಫುಲೆ ಅನೇಕ ಸುರಕ್ಷಿತ ತಾಣಗಳನ್ನು ಸೃಷ್ಟಿಸುತ್ತಾಳೆ. ಮಹಿಳಾ ಸಬಲೀಕರಣದಲ್ಲಿ ಇದೊಂದು ತುಂಬಾ ಮಹತ್ವದ ಕೆಲಸ. ಇಲ್ಲಿ ನಾವು ಗಮನಿಸಬೇಕಾದ್ದು, ಇಂತಹ ಕೆಲಸ ಬೇರೆಡೆ ನಡೆಯದೇ ಇರುವಾಗ *ಸಾವಿತ್ರಿ ಬಾಯಿ* ಅದನ್ನು ತುಂಬಾ ಪ್ರೌಢ ಮಟ್ಟದಲ್ಲಿ ಮಾಡುತ್ತಿದ್ದಳು. ಕೆಳ ಜಾತಿಯ ಮಹಿಳೆಯರ ಜೊತೆ ಸಾವಿತ್ರಿ ಬಾಯಿ ಮಾಡಿರುವ ಕೆಲಸವನ್ನು ನೋಡಿದ್ರೆ, ಬಹುಶಃ ಭಾರತದಲ್ಲಿ ಇನ್ನೊಂದು ವ್ಯಕ್ತಿ ಈ ಮಟ್ಟದಲ್ಲಿ, ಈ ಗಾಢತೆಯಲ್ಲಿ, ಹಾಗೂ ಈ ವಿಸ್ತರಣೆಯಲ್ಲಿ ಮಹಿಳೆಯರ ಜೊತೆ ಕೆಲಸ ಮಾಡಿಲ್ಲ ಎಂದು ಅನ್ನಿಸುತ್ತದೆ.

ಸಾವಿತ್ರಿ ಎಂತಹ ದಿಟ್ಟ ಹೆಂಗಸೆಂದರೆ ತನ್ನ ಪತಿ ತೀರಿಕೊಂಡಾಗ ಅವರ ದತ್ತು ಪುತ್ರ ಚಿತೆಗೆ ಅಗ್ನಿ ಸ್ಪರ್ಶಿಬಾರದೆಂದು ಆ ಊರಿನ ಜನರೆಲ್ಲ ತಕರಾರು ಎಬ್ಬಿಸುತ್ತಾರೆ. ಆ ಸಂದರ್ಭದಲ್ಲಿ ಸಾವಿತ್ರಿ ಎಲ್ಲರನ್ನೂ ದಂಗುಬಡಿಸುವ ಹಾಗೆ ತನ್ನ ಪತಿಯ ಚಿತೆಗೆ ತಾನೇ ಅಗ್ನಿ ಸ್ಪರ್ಶಿಸಲು ಮಹಾಶಕ್ತಿಯಂತೆ ಮುನ್ನುಗ್ಗಿ ತನ್ನ ಪತಿಯ ಚಿತೆಗೆ ಅಗ್ನಿ ಸ್ಪರ್ಶಿಸುತ್ತಾಳೆ. ಅಲ್ಲಿಯ ತನಕ ಮಹಿಳೆಯರಿಗೆ ಸ್ಮಶಾನ ಭೂಮಿಗೆ ಹೋಗುವ ಅನುಮತಿಯೂ ಇರಲಿಲ್ಲ. ಆದರೆ ಒಮ್ಮೆಲೇ ಇಡೀ ಸಮಾಜದ ಕಟ್ಟುಪಾಡುಗಳ ಕಟ್ಟಳೆಗಳನ್ನು ಬುಡಸಮೇತ ಕಿತ್ತು ಹಾಕಿದಳು. ಪುಣೆಯಲ್ಲಿ ಪ್ಲೇಗ್ ಬಂದಾಗ ಸಾವಿತ್ರಿ ಬಾಯಿ ಅದಕ್ಕೆ ತುಂಬಾ ಕೆಲಸ ಮಾಡುತ್ತಾಳೆ. ಕೆಳಜಾತಿಯ ಮಗವೊಂದು ಗತಿಯಿಲ್ಲದೆ ಪ್ಲೇಗ್‌ಗೆ ತುತ್ತಾಗಿ ಯಾರು ಮುಟ್ಟದಿರುವಾಗ ಸಾವಿತ್ರಿ ಬಾಯಿ ಆ ಮಗುವನ್ನು ಅಪ್ಪಿಕೊಂಡು ಆಸ್ಪತ್ರೆಗೆ ತರುತ್ತಾಳೆ. ಈ



ಸಂದರ್ಭದಲ್ಲಿ ಆಕೆಯೂ ಪ್ಲೇಗ್‌ಗೆ ತುತ್ತಾಗಿ ವೀರ ಮರಣ ಅಪ್ಪುತ್ತಾಳೆ. ಎಂತಹ ಮರಣ ಅದು!

ಹೀಗೆ ಮಹಿಳಾ ಶಿಕ್ಷಣದಿಂದ ಪ್ರಾರಂಭವಾದ ಸಾವಿತ್ರಿ ಬಾಯಿಯ ಕೆಲಸ, ಜನರ ಜೀವನವನ್ನು ಉತ್ತಮಗೊಳಿಸಲು ವೈವಿಧ್ಯಮಯ ಕಾರ್ಯಕ್ರಮಗಳನ್ನು ಮಾಡುತ್ತಾ, ಜೀವನೋಪಾಯ, ಆರೋಗ್ಯ ಹಾಗೂ ಸಮಾಜ ಬದಲಾವಣೆಯ ಮಟ್ಟಕ್ಕೆ ತಲುಪುತ್ತದೆ. ಒಂದು ಪ್ರದೇಶದ ಸಾಮಾಜಿಕ ನೀತಿನಿಯಮಗಳನ್ನು ಪ್ರಶ್ನಿಸಿ ಅದನ್ನು ಬದಲಾಯಿಸುವಲ್ಲಿ ತುಂಬಾ ಯಶಸ್ಸು ಸಾಧಿಸುತ್ತಾಳೆ ಸಾವಿತ್ರಿ ಬಾಯಿ ಫುಲೆ!

*ಸಾವಿತ್ರಿ-* ಈ ಹೆಸರು ಕೇಳುವಾಗಲೇ ಒಮ್ಮೆ ನಮ್ಮನ್ನು ಬುಡಮೇಲುಮಾಡಿ ನೆಲಕ್ಕೆ ಅಪ್ಪಳಿಸಿ ಹೊಡೆದ ಹಾಗೇ ಭಾಸವಾಗುತ್ತದೆ. ಸಾವಿತ್ರಿ ಅಂತರ್ ಜನಮ್. 1905ರಲ್ಲಿ ಕೇರಳದಲ್ಲಿ ಒಂದು ವಿಶಿಷ್ಟ, ಎಲ್ಲರನ್ನು ಬೆರಗುಗೊಳಿಸುವ ಕೋರ್ಟ್ ಕಟ್ಟಳೆ ನಡೆಯಿತು. ಸೂಳೆಗಾರಿಕೆ ಮಾಡಿದ ಒಂದು ಹೆಂಗಸನ್ನು ಸಮಾಜ ಪ್ರಶ್ನಿಸಿತು. ಆಕೆ ಮಾಡಿದ ಆ ಘೋರ ಪಾಪಕ್ಕೆ ತಕ್ಕುದಾದ ಶಿಕ್ಷೆ ವಿಧಿಸಲು ಮುಂದಾಗಿತ್ತು. ಹೀಗೆ ಸೂಳೆಗಾರಿಕೆಯಿಂದ ಸಮಾಜದ ಗಂಡಸರನ್ನು ಕೆಡಿಸುವ ಸೂಳೆಯನ್ನು ಶಿಕ್ಷಿಸಿ ಸಮಾಜದಲ್ಲಿ ನೆಮ್ಮದಿಯನ್ನು ತರಲು ಮನಸ್ಸು ಮಾಡಿತ್ತು. ಆ ಕಾಲದ ರಾಜನ ತನಕ ಈ ಮಹಿಳೆಯ ಕೆಟ್ಟಕೆಲಸದ ಬಗ್ಗೆ ದೂರು ಹೋಗಿತ್ತು. ರಾಜನೇ ಖುದ್ದಾಗಿ ಈ ಸಮಸ್ಯೆಯನ್ನು ಬಗೆಹರಿಸಲು ಮುಂದಾದ. ವಿಚಾರಣೆ ನ್ಯಾಯವಾದಿಗಳ ಮೂಲಕ ಪ್ರಾರಂಭಿಸಿದ. ವಿಚಾರಣೆ ಪ್ರಾರಂಭವಾಯಿತು. ಎಲ್ಲಾ ಗಂಡಸರು ಅವಳಿಗೆ ಅತ್ಯಂತ ಕಠಿಣ ಶಿಕ್ಷೆಯಾಗುತ್ತದೆ ಎಂದು ಕಣ್ಣು, ಕಿವಿ, ಬಾಯಿ ಬಿಟ್ಟು ಕಾಯುತ್ತಿದ್ದರು. *ಸೂಳೆ ಸಾವಿತ್ರಿ* ಮಾತಾಡುತ್ತಾಳೆ. “ನಾನು ಮಾಡಿದ್ದು ತಪ್ಪು ಎಂದಾದರೆ ನನಗೆ ಶಿಕ್ಷೆ ಕೊಡಿ, ಅದನ್ನು ನಾನು ಸ್ವೀಕರಿಸುತ್ತೇನೆ. ನನ್ನ ಈ ಅಪರಾಧದಲ್ಲಿ ಸಹಭಾಗಿಯಾದವರಿಗೂ ನ್ಯಾಯವಾದಿಗಳು ಶಿಕ್ಷೆ ನೀಡುತ್ತಾರಲ್ಲ. ಇಂತಹ ಒಂದು ಭೀಕರವನ್ನು ನಾನೊಬ್ಬಳೇ ಮಾಡಲು ಸಾಧ್ಯವಿಲ್ಲ. ನ್ಯಾಯವಾದಿಗಳು ನ್ಯಾಯ ಒದಗಿಸಬೇಕು.”

ನ್ಯಾಯವಾದಿಗಳು ಸಮ್ಮತಿಸುತ್ತಾರೆ. ಜೊತೆಗೆ “ಆಧಾರ ಬೇಕು” ಅನ್ನುತ್ತಾರೆ. “ಸರಿ”ಯೆಂದು ಸಾವಿತ್ರಿ ನ್ಯಾಯಾವಾದಿಯ ಸೋದರರ ಹೆಸರಿಂದ ಮಾತು ಪ್ರಾರಂಭಿಸುತ್ತಾಳೆ. ಚಕಿತನಾದ ನ್ಯಾಯವಾದಿ ಆಧಾರ ಕೇಳುತ್ತಾನೆ. ಸಾವಿತ್ರಿ ಅವರ ಮನೆತನದ ಹಳೆಯ ಆಭರಣವನ್ನು ಆಧಾರವಾಗಿ ನೀಡುತ್ತಾಳೆ! ಆಮೇಲೆ ಪ್ರತಿಷ್ಠಿತ ದೇವಸ್ಥಾನದ ಅರ್ಚಕರು. ಆಧಾರ, ದೇವಿಗೆ ಭಕ್ತರು ನೀಡಿದ ಬೆಲೆ ಬಾಳುವ ವಸ್ತುಗಳು! ಶ್ರೀಮಂತ ವರ್ತಕ, ಅವನ ಮೈಯ ಮಾಟ ಸರಿಯಾಗಿ ನೆನಪಿಟ್ಟು ಹೇಳುತ್ತಾಳೆ! ಹೀಗೆ ಒಂದೊಂದು ಪ್ರತಿಷ್ಠಿತ, ಒಳ್ಳೆಯ, ಸಜ್ಜನ ಗಂಡಸರು ಬೀಳುತ್ತಾ ಹೋಗುತ್ತಾರೆ. ಪ್ರತಿಯೊಬ್ಬರ ಬಗ್ಗೆ ಹೇಳಿದಾಗಲು ಸಾವಿತ್ರಿಯ ಬಳಿ ಸಮರ್ಪಕವಾದ ಆಧಾರವಿರುತ್ತದೆ. ಆವ್ಯಕ್ತಿ ಅವಳನ್ನು ಸಮೀಪಿಸಿದ ದಿನ, ಸಂದರ್ಭ, ಸ್ಥಳ . . . . ಹಾಗೂ ವಿವಾದತೀತ ಆಧಾರ! ಒಬ್ಬರೇ ಇಬ್ಬರೇ? ಸಂಭಾವಿತರಂತೆ ನಟಿಸುತ್ತಿದ್ದ ಇಡೀ ಗಂಡು ಸಮುದಾಯ ಒಬ್ಬರಾದ ಮೇಲೊಬ್ಬರು ಬೀಳುತ್ತಾ ಹೋಗುತ್ತಾರೆ. ಸಾವಿತ್ರಿ ಒಬ್ಬೊಬ್ಬರನ್ನೇ ಕೈಗೆತ್ತಿ ಬೆತ್ತಲೆಗೊಳಿಸಿ ಕೊಚ್ಚಿ ನ್ಯಾಯಾಲಯದ ಒಳಗೆಯೆ ಚಿಂದಿಚಿಂದಿ ಮಾಡಿ ಬಿಸಾಡುತ್ತಾಳೆ! ಯಾರ್‍ಯಾರ ಹೆಸರು ಬರುವುದನ್ನು ನೋಡಿ ಉಳಿದ ಸಂಭಾವಿತರು, ಕೊಚ್ಚಿಯ ರಾಜನಿಗೆ ದೂರು ಕೊಟ್ಟು ಈ ವಿಚಾರಣೆಯನ್ನು ನಿಲ್ಲಿಸುತ್ತಾರೆ. ಆ ಕಾಲದಲ್ಲಿ ಸಾವಿತ್ರಿಯ ಪ್ರಭಾವ ಎಷ್ಟಿತ್ತೆಂದರೆ ಜನ ತಮಾಷೆ ಮಾಡುತ್ತಿದ್ದರಂತೆ ರಾಜ ಯಾಕೆ ವಿಚಾರಣೆ ನಿಲ್ಲಿಸಿದ . . . . ಮುಂದಿನ ಹೆಸರು ಅವನದ್ದಲ್ಲ ತಾನೇ? ಹ್ಹ ಹ್ಹ ಹ್ಹ! ಈ ವಿಚಾರಣೆ ಯಾಕೆ ಇಷ್ಟು ಮುಖ್ಯ ಅಂದರೆ ಸಾವಿತ್ರಿ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವಳು. ಕೇರಳದ ನಂಬೂದರಿ ಬ್ರಾಹ್ಮಣರು ಅತ್ಯಂತ ಹೆಚ್ಚು ಮಡಿಮೈಲಿಗೆಯನ್ನು ಆಚರಿಸುವವರು. ನಂಬೂದರಿ ಬ್ರಾಹ್ಮಣ ಮಹಿಳೆಯರು ಅತ್ಯಂತ ಹೆಚ್ಚು ಶೋಷಣೆಗೆ ಒಳಪಟ್ಟವರು. ಅವರು ಹೊರಗೆ ಓಡಾಡಲಿಲ್ಲ, ಕಣ್ಣೆತ್ತಿ ಯಾರನ್ನು ನೋಡಲಿಲ್ಲ, ಗಂಡಸರ ಮುಂದೆ ಮಾತು ಬಿಡಿ, ಕಾಣಿಸಿಕೊಳ್ಳಲು ಇಲ್ಲ. ಹೆಚ್ಚೇಕೆ, ರವಕೆ ತೊಡಲು ಇಲ್ಲ, ಇಂತಹ ಒಂದು ಶೋಷಣೆಭರಿತ ಸಮಾಜದಲ್ಲಿ ಹುಟ್ಟಿ ಆ ಸಮಾಜವನ್ನೇ ಬುಡಮೇಲುಮಾಡಿ ಬಿಸಾಡಿದವಳು ಸಾವಿತ್ರಿ. ಅವಳ ಜೀವನ ಎಂಬುದು ಅಂತ ಶೋಷಣೆ ವಿರುದ್ಧದ ಅದ್ಭುತವಾದ ಒಂದು ಪ್ರತಿಭಟನೆ. ಈ ಕೇಸು ಯಾಕೆ ಇಷ್ಟು ಪ್ರಸಿದ್ಧಿ ಅಂದರೆ ಇದು ನಂಬೂದರಿ ಬ್ರಾಹ್ಮಣರ ಒಟ್ಟು ಜೀವನ ಶೈಲಿಯನ್ನೇ ಬದಲಾಯಿಸಿತು. ಕೇರಳದ ಚಿಂತನೆ, ಹಾಗೂ ಸಮಾಜದ ರೀತಿ ನೀತಿಯನ್ನೇ ಬದಲಾಯಿಸಿತು. ಸಾವಿತ್ರಿ ಇಡೀ ಆ ಜಡ್ಡುಗಟ್ಟಿದ ಸಂಸ್ಕೃತಿಯನ್ನೇ ಬದಲಾಯಿಸಿದ ಕ್ರಾಂತಿಕಾರಿ ಮಹಿಳೆಯಾದಳು. ಸಮಾಜದ ಬಂಧನಗಳನ್ನು ಕಳಚುವುದು ತುಂಬಾ ಕಷ್ಟ. ಒಂಟಿಯೊಂಟಿ ಮಹಿಳೆಯರಿಗೆ ಅಷ್ಟು ಕಷ್ಟ. ಅಂತಹ ಸಂದರ್ಭದಲ್ಲಿ ಈಕೆ ಒಬ್ಬಳೇ, ಒಮ್ಮೆಗೆ ಸಮಾಜದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಬಂಧನಗಳನ್ನು ಗಾಳಿಗೆ ತೂರಿ, ತನಗೂ, ತನ್ನ ಹಾಗಿನ ಎಲ್ಲಾ ಮಹಿಳೆಯರಿಗು ಬಂಧನದಿಂದ ಮುಕ್ತಿ ದೊರಕಿಸಿ ಕೊಡುತ್ತಾಳೆ. ನಂಬೂದರಿ ಬ್ರಾಹ್ಮಣರಲ್ಲಿ ಈ ಪ್ರಕರಣದಿಂದಾಗಿ ಅತ್ಯಂತ ಹೆಚ್ಚು ಬದಲಾವಣೆಗಳಾಗುತ್ತವೆ. ಮಹಿಳೆಯರಿಗೆ ರವಕೆ, ಶಿಕ್ಷಣ,



ಉದ್ಯೋಗ ಹಾಗೂ ಸಮಾನತೆ ಎಲ್ಲವೂ ಬರುತ್ತದೆ. ಈ ಪ್ರಕರಣದ ಇನ್ನೊಂದು ಅಂಶವೇನೆಂದರೆ ಸಾವಿತ್ರಿ ಗೆಲ್ಲುವುದು ದಾಖಲೆಗಳಿಂದ, ಆಧಾರಗಳಿಂದ! ಈ ಪ್ರಕರಣದ ದಾಖಲೆ ಇನ್ನೂ ಕೇರಳದಲ್ಲಿ ಇದೆ. ಅದನ್ನು ನೋಡಿ ಈಗಲೂ, ಪತ್ರಿಕಾ ವರದಿ, ಪುಸ್ತಕ, ನಾಟಕ ಪ್ರದರ್ಶನಗಳಾಗುತ್ತಾ ಇವೆ. ಸಾವಿತ್ರಿ ಸಂದುಹೋಗಿ. ಒಂದು ಶತಮಾನವೇ ಆಯಿತು. ಆದರೂ ಅವಳ ಆ ಕೆಲಸ ಇನ್ನೂ ಮುಂದುವರಿಯುತ್ತಿದೆ. ಇಡೀ ಸಮಾಜವನ್ನು, ಅದರ ಟೊಳ್ಳುತನವನ್ನು, ಇಬ್ಬಾಗತನವನ್ನು, ಶೋಷಣೆಯನ್ನು ತನ್ನ ಕೈಯ ಹಿಡಿತದಲ್ಲಿ ಉಸಿರು ಕಟ್ಟಿಸಿ ಅವಳು ನೆಲಕ್ಕೆ ಅಪ್ಪಳಿಸಿದಳು.

ಈ ಸಾವಿತ್ರಿ ಸಂಭಾವಿತರಾಗೇ ನಟಿಸುವ ಗಂಡು ಸಮಾಜಕ್ಕೆ ಕ್ಯಾಕರಿಸಿ ಉಗಿದವಳು! ಸಾವಿತ್ರಿ ಪ್ರಾರಂಭಿಸಿರುವ ಬದಲಾವಣೆ ಇನ್ನೂ ಸಮಾಜದಲ್ಲಿ ನಡೆಯುತ್ತಿದೆ. ಇಡೀ ಸಮುದಾಯಗಳು, ದೊಡ್ಡ ಸಮಾಜ ಮಾಡಲಾಗದ ಬದಲಾವಣೆಯನ್ನು ಈಕೆ ಒಬ್ಬಾಕೆ, ಸಲೀಸಾಗಿ ಇಡೀ ಸಮಾಜವನ್ನು ಎದುರು ಹಾಕಿಕೊಂಡು, ಯಾರ ಸಹಾಯವಿಲ್ಲದೆ ಮಾಡುತ್ತಾಳೆ. ಅದನ್ನು ಯಶಸ್ವಿಯಾಗಿ ಮಾಡುತ್ತಾಳೆ, ಈ ಮಹಾಸತಿ ಸಾವಿತ್ರಿ ಮಹಾಶಕ್ತಿ ಸಾವಿತ್ರಿ!

## ಬಿಂದುಗಳು -ರಕ್ಷಿತ್ ಅರುಣ್

**ಬಿಂದು- 1**


ಬಹಳವೇ ಕೆಟ್ಟರುವೆ ನಾನು ತಿಳಿಯುತಿದೆ
ನನಗೆ..
ನಿರ್ಜೀವ ವಸ್ತುಗಳು ಹೇಳುತಿವೆ ಕಥೆಯಾ
ಹುಚ್ಚನೇನಾದರೂ ಆದೇನೆ ನಾ
ಒಳಗೊಳಗೆ ಸಣ್ಣ ಭಯ..

ತಿಳಿಯುತಿದೆ ಈಗೀಗ ಮಳೆಹನಿಗಳ ಭಾಷೆ..
ನನಗೀಗ ಕವಿ ಕಾಣದ ಜಗವ ಕಾಣುವ ಆಸೆ..
ಹಗಲುಗನಸುಗಳು ಕೆಲವೊಮ್ಮೆ ಬೇಕು
ಈ ಬದುಕಿಗೆ..
ಅವುಗಳೇ ತೋರುತ್ತವೆ ನಮ್ಮ ಅಸ್ತಿತ್ವವ
ಜಗತ್ತಿಗೆ..

******

**ಬಿಂದು- 2**

ಯುಗದ ಆದಿಯ ಸಂಜೆ ಆಗಸವೆ
ಬರಿದು..
ಗೆರೆಯಂತೆ ಕಂಡನು ಚಂದ್ರ ಮೋಡಗಳು
ಸರಿದು..
ಹೊಸ ವರುಷದ ಹುಟ್ಟೇ ಕತ್ತಲೆಯಿಂದ
ಶುರು ಎಂದಾಗ..
ಹುಲು ಮಾನವ ನಾನು ಹೆದರಬೇಕೆ? ಕಷ್ಟಗಳು
ಬಂದಾಗ



## ಅದೇ ಸದ್ದು -ಶಿವಕುಮಾರ ಸಿ ಎಸ್

ಹೌದು ಮತ್ತದೇ ಸದ್ದು
ಇಂದು ಮೊನ್ನೆ ಬಲು ಹಿಂದೆ
ನಾವೂ-ನೀವೂ ಕೇಳಿದ್ದು;
ಹಣವೋ ಧರ್ಮವೋ ಸಿದ್ಧಾಂತವೋ
ಬೀದಿಯಲಿ ಬಿದ್ದು ಕೆಂಗಣ್ಣ ಬೀರಿದಾಗ
ಹೊಕ್ಕಳಿಡಿದು ವಾಕರಿಸುತ್ತಾ
‘ಅಯ್ಯೋ ಅಯ್ಯಯ್ಯೋ’ ಅಂದೇ ಅಂದದ್ದು
ಹೌದಿದೇ ಆ ನೆಪದ ಸದ್ದು!

ಈ ದೇಶದಲಿ,
ಮಾತಿಗೆ ಸ್ವ’ತಂತ್ರ’ವಿದೆಯಂತೆ
ಪಿಸ್ತೂಲಿಗೆ ಲೈಸನ್ಸೂ ಇದೆಯಲ್ಲ?
ಸತ್ಯ-ಮಿಥ್ಯಗಳ ನಸುಕಿನಲಿ
ಅಸಲೀತನದ ರಕ್ತ ಉದುರಿಸಿದ್ದಕ್ಕೆ
ಕರಾಳ ಇತಿಹಾಸವೊಂದಿದೆ ಬೇರೆ;
ಏನೋ ಕಾಣೆ, ವಿಧಿ ಇಲ್ಲದಂತೆ
ನಾವೂ-ನೀವೂ ಲೊಚಗುಟ್ಟುತ್ತಲೇ ಇದ್ದೇವೆ
ಕೆಮ್ಮಲಾಗದೆ, ಕ್ಯಾಕರಿಸಿ ಉಗಿಯಲಾಗದೆ
ಮತ್ತದೇ ಇತಿಹಾಸದ ಉಗುಳ ನುಂಗಿದ್ದೇವೆ.

ಕರಾಳ ಮುಖಬಿಂಬದ ವಿಕೃತ ಹೇಸಿಗೆ
ನಮ್ಮ ನಡುವಿನ ನಾಲಗೆಯ ಸುಟ್ಟಾಗ
ಸುಟ್ಟ ವಾಸನೆಯ ಕುಡಿದು ಮೂಗೊಳಗೆ ತಡೆದು
ಒಳಗಿನ ಗಾಂಧಿ ಗೌರಿ ತತ್ತರಿಸಿ ಹೋಗಿದ್ದಾರೆ;
ಅರೆರವಳಿಕೆಯ ಚುಚ್ಚಿಕೊಂಡಂವರು ನಾವು
ಮೂರ ದಿನ ಎದ್ದು ಧಿಕ್ಕಾರ ಕೂಗಿದ್ದೇವೆ
ಮತ್ತೆ ನೂರು ದಿನ ನಿದ್ದೆ ಗಡದ್ದು;
ಗೊರಕೆಯೂ ನಿಂತಿಲ್ಲ ಗುಂಡೂ ನಿಂತಿಲ್ಲ
ಅದರ ಪಾಡಿಗೆ ಅದು ಇದರ ಪಾಡಿಗೆ ಇದು!
ಇದಕೆಂತೋ ಮದ್ದು?



## ಅವಳು ಹೇಳಿದ ಕಥೆ 1 –ರಕ್ಷಿತ್ ಅರುಣ್

ಊರು ಬೇಡ, ಹೆಸ್ರೂ ಬೇಡ ಬಿಡು, ಹೆಸ್ರು ಬರೆದ್ ನಿಂಗೇನ್ ಆಗ್ಬೇಕು, ಓದಿ ಅವ್ರಿಗೇನಾಗ್ಬೇಕು. ಮಾನ ಮರ್ಯಾದೆ ಹೋಗೋದ್ ನಂಗ್ ತಾನೆ. ಕತೆ ಹೇಳ್ಬೇಕ್ ತಾನೇ, ಹೇಳ್ತೀನಿ...! ಕೇಳು. ಇಷ್ಟ ಆದ್ರೆ ಆ ಬೇಕ್ರಿಲೀ ಒಂದ್ ಬನ್ ಕೊಡ್ಸುಲ ಹೇ ಇಷ್ಟ ಆಗ್ಲಿಲ್ಲ ಅಂದ್ರೂ ಕೊಡ್ಸು, ಹಸಿವಾಗ್ತಿದೆ. ಹಸಿವು ಅಂದ್ರೇನ್ ಅಂತ ಕೇಳ್ಬೇಡ, ಹೊಟ್ಟೆ ತುಂಬಿದಾಗ ಉತ್ರ ಕೊಡ್ತೀನಿ.

ನಿಂಗ್ ಆಶ್ಚರ್ಯ ಆಗ್ಬೋದು, ನಮ್ ಅಮ್ಮಂಗೆ ನಾವು ತ್ರಿವಳಿ ಮಕ್ಳು. ನಾನು ಮತ್ತು ನನ್ ಅಣ್ಣಂದ್ರು. ಸರಿಯಾಗಿ ೩೭ ನಿಮಿಷಗಳ ಗ್ಯಾಪಲ್ಲಿ ಹುಟ್ಟಿದ್ದಂತೆ. ಅಪ್ಪ ಯಾರೋ ಗೊತ್ತಿಲ್ಲ. ಅಯ್ಯೋ...! ನಮಗೆ ಬುದ್ದಿಬಂದು ಅಪ್ಪ ಯಾರು ಅಂತ ಅಮ್ಮನ್ ಕೇಳೋಕ್ ಮೊದ್ಲೇ ಅಮ್ಮಾನೂ ಸತ್ ಹೋದ್ಳು. ಅಮ್ಮ ನಮ್ ಹಸಿವಿಗಾಗಿ ಸತ್ತಿದ್ದಂತೆ. ನಂಗ್ ಸರಿಯಾಗಿ ನೆನ್ಪಿಲ್ಲ. ನಾ ತುಂಬಾ ಚಿಕ್ಕೋಳ್ ಆಗ. ನಾವ್ ರಸ್ತೆ ಬದಿ ನಿಂತ್ ಜೋರ್ ಕೂಗ್ತಾಯಿದ್ವಿಯಂತೆ. ನಮ್ ಹಸಿವಿನ ಅಳು ನೋಡೋಕಾಗ್ದೇ, ಅಮ್ಮ ರಸ್ತೆಯ ಆಚೆ ಇದ್ದ 'ಅಯ್ಯಂಗಾರ್ ಬೇಕ್ರೀಲಿ" ಯಾರೋ ಎಸೆದ ಬನ್ನೋ, ಬಿಸ್ಕೀಟೋ ತರೋಕೆ ಹೋದಾಗ ಕೆಎಸ್‌ಆರ್‌ಟಿಸಿ ಬಸ್ ಗುದ್ದಿ ಹಿಂದಿಂದ ಬಂದ ಲಾರಿ ಮೈಮೇಲೆ ಹತ್ಕೊಂಡ್ ಹೋಯ್ತಂತೆ.

ಅಮ್ಮ ಸತ್ತ ದಿನದಿಂದ ನನ್ ಅಣ್ಣಂದ್ರು ಎಲ್ ಹೋದ್ರೋ ಗೊತ್ತಿಲ್ಲ. ಅಮ್ಮ ಇಲ್ದೇ ಎರಡು ದಿನ ಅತ್ತೀದೀನಿ. ಆದ್ರೆ ಯಾರ್ ಕೇಳ್ತಾರೆ, ಹೇಳಿ? ಬೇಕ್ರಿಗೆ ಬಂದ್ ಹೋಗೋರೆಲ್ಲಾ, ಛೇ! ಪಾಪ, ತಾಯಿ ಸತ್ ಮಗ್ಳು ಅಂತ್ ಬನ್ನೋ, ಬಿಸ್ಕೀಟೋ ಕೊಟ್ ಹೋಗ್ತಿದ್ರು. ದಿನ ಹುಟ್ಟೋರಿಗೆ ಊಟ ಹಾಕೋರ್ಯಾರು ಹೇಳಿ. ನನ್ ತರದ್ವು, ಮೈಸೂರಲ್ಲಿ ಸಾವ್ರ ಜನ ಇದ್ದಾರೆ. ಅವತ್ತಂದ ದೇವ್ರನ್ನೇ ಹೋಲುವ ಸಣ್ ಹುಡ್ಗ ತನ್ನಪ್ಪನ ಜೊತೆ ಬೇಕ್ರಿಗೆ ಕೇಕ್ ತಿನ್ನೋಕೆ ಬಂದಿದ್ದ. ಆ ಮುದ್ದು ಹುಡುಗನ ಪೆಟ್‌ನೇಮ್ ಪುಟ್ಟ ಅಂತ. ಅಲ್ಲಿಂದಲೇ ನನ್ ಲೈಫ್ ಚೇಂಜ್ ಆಗಿದ್ದು. ನಾನ್ ಅತ್ತ ಇದ್ದಿದ್ ನೋಡಿ ಪಾಪ ಹುಡ್ಗ ತನ್ನಪ್ಪನ ಜೊತೆ ಹಠ ಮಾಡಿ ಮನೆಗೆ ಕರ್ಕೊಂಡ್ ಹೋಗೋಣ ಅಂತ ಅಳೋಕೆ ಶುರುಮಾಡ್ದ. ನಂಗ್ ಸರಿಯಾಗಿ ನೆನ್ಪಿದೆ. ಏನ್ ಆಶ್ಚರ್ಯ ಅಂತೀರ. ಮಗನ ಒತ್ತಾಯಕ್ಕೆ ಅಪ್ಪ 'ಹುಂ' ಅಂದೇಬಿಟ್ಟ. ಬಹುಶಃ ಅವರಿಗೂ ನನ್ ಪರಿಸ್ಥಿತಿ ಬಗ್ಗೆ ಕನಿಕರ ಹುಟ್ಟಿರಬೇಕು. ಅಂತು ನಂಗೂ ಒಂದ್ ಮನೆ ಸಿಕ್ತು. ನನ್ ಕರ್ಕೊಂಡ್ ಬಂದ ಯಜಮಾನ್ರು ಮೊದ್ಲು ಮಾಡಿದ ಕೆಲ್ಸ ಅಂದ್ರೆ ಅದು ನನಗೆ ಸ್ನಾನ್ ಮಾಡ್ಸಿದ್ದು.

ಯಜಮಾನಿ ಹೊತ್‌ಹೊತ್ತಿಗೆ ಊಟ ಹಾಕ್ತಿದ್ರು. ನೀವೇ ಹೇಳಿ ಈ ಮೈಸೂರಲ್ಲಿ ಯಾರಾದ್ರೂ ಪುಕ್ಸಟ್ಟೆ ಊಟ ಹಾಕ್ತಾರ? ಇವ್ರು ಹಾಕ್ತಿದ್ರು. ಹೀಗೆ ಜೀವನ ಮೂರ್‍ನಾಲ್ಕ್ ತಿಂಗಳು ಚೆನ್ನಾಗಿ ಇತ್ತು. ಆದ್ರೆ ಪುಟ್ಟನ ಎಲ್‌ಕೆಜಿ ಫ್ರೆಂಡ್ 'ಸೋನು'ವರೆಗೂ ಮಾತ್ರ. ಪಾಪಿ ಹುಡ್ಗ, ಸ್ಕೂಲ್ ಮುಗ್ಸಿ ಪುಟ್ಟನ ಜೊತೆ ಮನೆಗೆ ಬಂದ ಸೋನು. ನಾನೊಂದು ಹೆಣ್ಣು ಅಂತನೂ ನೋಡ್ದೇ ಆಟ ಆಡ್ಸೋ ನೆಪದಲ್ಲಿ ಕಾಲ್‌ಮೆಟ್ಟೇ ಬಿಟ್ಟ. ಜೋರಾಗಿ ಕೂಗ್ದೆ. ಯಜಮಾನ್ರು ಬಂದ್ರು. ಸೋನುಗೆ ಬೈತಾರೆ ಈಗ ಅನ್ಕೊಂಡೆ. ಆದ್ರೆ ಹಾಗಾಗ್ಲಿಲ್ಲ. ಸೋನೂನೆ ನನ್ ಮೇಲೆ ಕಂಪ್ಲೇಂಟ್ ಮಾಡ್ದ, "ಅಂಕಲ್ ನಾಯಿ ಕಚ್ತು" ಅಂತ. ಇದೆಂತಾ ಅನ್ಯಾಯ? ಯಜಮಾನ್ರಿಗೆ ರಿಯಲ್ ಫ್ಯಾಕ್ಟ್ ಹೇಳೋಣ ಅಂತ ಬಾಯಿಬಿಟ್ಟೆ. ಊಹೂಂ "ಬೌ..ಬೌ..ಬೌ.." ಛೇ! ನನ್ ಭಾಷೆ ಅವ್ರಿಗೆ ಹೆಂಗ್ ಗೊತ್ತಾಗ್ಬೇಕು. ತಪ್ಪು ಅವನದ್ದೇ ಆದ್ರೂ ನನಗೇ ನಾಲ್ಕುಬಿಟ್ರು. ಊರಲ್ಲೆಲ್ಲಾ ರೇಬಿಸ್ ಇದ್ಯಂತೆ. ಆ ಖಾಯಿಲೆಗೆಲ್ಲ ನಮ್ ಜಾತಿಯವ್ರೆ ಕಾರಣ ಅಂತೆ. ಆದ್ರೆ ನಾನ್ ಕಾರಣ ಅಲ್ವಲ್ಲ. ಆದ್ರೆ ಯಾರ್ ಕೇಳ್ತಾರೆ ಹೇಳಿ. ಪುಟ್ಟನ ವಿರೋಧದ ನಡುವೆಯೇ ಒಂದ್ ಕೆಮಿಕಲ್ ಚೀಲದಲ್ಲಿ ನನ್ನ ತುಂಬಿದ ಯಜಮಾನ್ರು ತಮ್ಮ ಬೈಕಲ್ಲಿ ಹೊರಟ್ರು.

ಆ ಕೆಮಿಕಲ್ ಚೀಲದ ವಾಸ್ನೆಗೆ ಅಳು ಬಂತೊ, ಮನೆ ಬಿಡ್ತ ಇರೋದ್ಕೆ ಅಳು ಬಂತೊ ಗೊತ್ತಿಲ್ಲ. ಚೀಲ ಬಿಚ್ಚಾಗ ಹೊರಗ್ ಬಂದೆ. ಒಂದೇ ಸಲ ಜೀವ ಬಂದಂಗ್ ಆಯ್ತು. ಮತ್ತೆ ಅದೇ ಅಯ್ಯಂಗಾರ್ ಬೇಕ್ರಿ ಹತ್ರ ಇದ್ದೆ. ಈಗ ಸಮಸ್ಯೆ ಇರೋದ್ ನನ್ ಹಳೆಗೆಳೆಯರು ನನ್ನ ಗುರುತುಹಿಡಿತಾರ ಅನ್ನೋದು..!

ಮೈಸೂರ್ ಡೇಜ್...



## Children and their reading habits -Jyothi Koppal

The word ‘Children’ itself suggests that creativity, energy and eager to learn new things from others. This, therefore, helps us to develop reading habit among them by using different means than the traditional methods. As we all know children are interested in viewing pictures, listening stories, getting involved in solving some difficult puzzles or tasks. Keeping this basic understanding in mind, we should encourage them to see pictures; cards with a story. The children try to correlate the picture with the theme of the story and imagine beyond that that instigate them to read more.

Telling a story and pausing at some point is another interesting mode that engages the children to read. In this way, we read a story not until the end in a way that the children get curious. We ask the children to read the story themselves to know what happened after that in that story. They read the storybook completely which motivates them to read more stories like this. Furthermore, we can ask them to solve puzzles through reading a book. So using these methods we can easily build reading habits among children. We also need to encourage the children to read short stories, jokes and academic stories in newspapers. So this would help them to sustain their reading habits.

Another interesting way is, we ask the children to find repeated words in a particular chapter, after that, we tell them to find small words, big words, and the word which they frequently use in our day to day life. This way, create interest among children to read and the same way they will start finding meanings for those words from textually to contextually with a little input from MKOs (More knowledgeable Others). As a teacher, we always find an innovative way to make them read. After reading we need to ask them what they feel about reading. We must be careful that if we are providing them some storybooks to read, we should not ask them to extract moral out of it, which collapses their own understanding in a different manner based on their exposure and pre-knowledge. Moreover, it sustains the joy of story reading if we keep it open for them. If you ask the moral every time, they become focused on finding moral in the story and become anxious as they need to answer their teachers immediately after listening to the story. The process of reading should get



importance than its outcome and it encourages the children enjoy their reading.

During school situation, teachers will get many opportunities to work on reading abilities and capabilities of the children. Same time we need to encourage students to read short life stories of kings, historical persons, freedom fighters, authors etc. through which we can enhance their knowledge, and create interest in reading of a variety of books to sustain their reading habit. As I personally observed in classrooms, the students show interest in reading the stories, which are closely connected to their lives and the teacher as a role in it. He/she can expand their variety of thinking from local to national and international life. Reading on different cultures can enable them to build their self-esteem by broadening their mind and to celebrate the diversity in the classroom, which is essential in Indian scenario where every classroom is a mini India.

## ಬಿಂದು- 3 ರಕ್ಷಿತ್ ಅರುಣ್

ಬಾಗಿಲಂಚಲಿ ನಿಂತು ಯಾರನ್ನೋ
ಕಾಯುತ್ತಿದ್ದಳು ಅವಳು..
ಹೊಳಪಿಲ್ಲದಾ ಕಂಗಳಲಿ
ಹತಾಶೆಯ ನೆರಳು..
ಹರಿದ ಬಟ್ಟೆಯಲಿ ಹರಿದ ಜೀವನವ
ತೋರುತಿಹಳು..

ಜೀವನದಾ ಪಯಣದಲಿ ತನ್ನ ಮೂಲವನೇ
ಮರೆತು ಚಲಿಸಿದ ಆತ..
ಮಡದಿ ಮಕ್ಕಳ ಸುಖಕೆಂದು ಹೆತ್ತವಳ
ಬಿಟ್ಟು ಕೂತ..
ಇಂದು ನೆಲೆ ಇಲ್ಲದಾ ಈ ಜೀವಕೆ ಯಾವುದೋ
ಆಶ್ರಮದ ನೆರಳು..
ವರುಷಗಳ ಹಿಂದೆ ಬಂದ ತನ್ನ ಕಂದನನ್ನು
ಇನ್ನೂ ಕಾಯುತಿವೆ ವೃದ್ಧೆಯ ಕಂಗಳು..

*****



## A conversation with a girl in a bus –Anil Kottur

After completion of the two-day State Level Fellows and Associates meeting in Bengaluru, the next day I started to move from Bengaluru to my hometown to celebrate  Dasara festival. As it was the peak of festive time, finding the buses was not so easy for me in Bengaluru and after much struggle I managed to find an ordinary KSRTC bus which started at 6:30 pm in Bengaluru and reached Gulbarga by 10 am on next day morning. With an overweight baggage, I started from Gulbarga to Chincholi, which is my Taluk. I reached there by 12 pm. Again from there I had to wait for 3 hours without food to get a bus to reach my village. Ah! Finally!, at 3 pm I found that the bus had arrived, due to heavy luggage and full of rush I had to board the bus after all the passengers got into. The bus was full of rush and I stand at just beside the conductor seat after arranging my luggage safely. “Brother you can sit here” I heard an empathetic voice from a side. It was a girl who was studying in 9th standard in a Morarji Desai school and was returning to home to celebrate the festival just like me. Her Thanda (now there is a proposal to convert the LTs into villages) is adjacent to my village. She had occupied the whole three members’ seat for her father and elder sister who were on another bus which was about to reach the Chincholi bus stand. But it seemed her that they might not reach by the time this bus leaves, so she offered me the seat to sit, but on a condition, if her father and sister arrive before the bus moves, I need to make the space for them. But, unfortunately, they were late by five minutes and the bus left the bus stand.

The conversation:

The conversation started with an introduction of us to each other. Her family consists a total of 5 members.  There were 3 daughters, father and mother. Her parents have been doing agriculture for 20 years, her cousins are well settled in the government and private sectors which in turn motivated her parents to see their children in the more or less same positions. Her dream is to become a doctor and to see their parents to be only guiding the workers in their field instead of doing physical work and take them on a flight where they wish to, she wants to see a society where all the girls in the region should go for the higher study and get a job and become



independent economically, socially and culturally instead of indulging in the early childhood (the community and the region has relatively more number of child marriages) marriages, she blamed their community (Lambani) especially her parents who indulge in the same. We have to remember that the community in this region has been in the national and international news for a long time due to selling of the girl child for money, I was very happy to discuss a gamut of social issues viz. caste, religion, gender and racial discrimination with a 9th standard school going girl who has projected a dream society that aligns with the constitutional progressive goals. We have discussed throughout a one and a half journey amidst of crowd in the bus. We seldom find a high school girl from a remote area who has a deep concern over a gamut of social issues; discuss the same in public, confident about her career and optimist to see equality in the society in the long run. After the discussion with her, I forgot my 23hours irritating journey and felt very happy and instilled elan and positivity from her and got down in my village in a hope of her dream to become a reality. And her name is KAVERI.

## ಬಿಂದು- 4 –ರಕ್ಷಿತ್ ಅರುಣ್

ಮರಳಲ್ಲಿ ಹುದುಗಿದ ಹೆಜ್ಜೆ ಗಾಢವಾಗಿದ್ದರೂ
ಮಾಸುವುದು ಸಹಜ..
ವರುಷಗಳ ಪ್ರೀತಿಯನು ಹೀಗೆಯೇ
ಮರೆಯುವವನು ಮನುಜ..
ಮಾಸಿಹೋದ ಮೇಲೆ ಮರಳಿಗೆ ಹೆಜ್ಜೆಯ
ನೆನಪಿಲ್ಲ..
ಮರೆತಂತೆ ಕಂಡರೂ ಪ್ರೀತಿಯಾ
ನೆನಪುಗಳಿಗಳಿವಿಲ್ಲ..

ಮರಳಲ್ಲಿ ಮುಂದೊಮ್ಮೆ ಹೊಸ ಹೆಜ್ಜೆ ಹೊಸ
ಹುರುಪು..
ಮನದಿ ಹೊಸದೇನೇ ಇದ್ದರೂ ಮಾಸೋಲ್ಲ ಹಳೆ
ನೆನಪು..
ಮರಳಿಗೂ ಮನಸಿಗೂ ಹೋಲಿಕೆ ಇಷ್ಟೇ..
ಮನ ಮರಳಂತಾಗದು;
ಬರಿ ಮರುಳಾಗುವುದಷ್ಟೇ..

****



## ತರಗತಿಯಲ್ಲಿ ಭಾಷೆಯ ಸವಾಲುಗಳು! - ಮಂಜುನಾಥ್ ಎ.ಆರ್

ಶಾಲೆಯು ಸಮುದಾಯ ಮತ್ತು ಸಮಾಜದ ಕಲಿಕಾ ವಾಹಿನಿ, ಸುಸ್ಥಿರ, ನ್ಯಾಯೋಚಿತ ಸಮಾಜದ ಬಹು ಮುಖ್ಯ ಅಂಗ. ಯಾಕೆಂದರೆ ಆ ದೇಶದ ಅಭಿವೃದ್ಧಿ ಅಲ್ಲಿನ ತರಗತಿ ಕೋಣೆಯಲ್ಲಿ ರೂಪುಗೊಳ್ಳುತ್ತದೆ ಎನ್ನುವಾಗ ನಾವು ಮಗುವಿಗೆ ನೀಡುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಒಮ್ಮೆ ಪರಾಂಬರಿಸಬೇಕು ಎನಿಸುತ್ತದೆ. ಈ ಕಾಲ ಮಗುವಿನ ಕಲಿಕೆಗೆ "ಸಂಕ್ರಮಣದ ಕಾಲ" ಮಗು ತನ್ನ ಮನೆಯ ಸುತ್ತ, ಗೆಳೆಯರ ಸುತ್ತ, ಸಂಬಂಧಿಕರ ಆಸು-ಪಾಸು, ಶಾಲೆಯಲ್ಲಿನ ಆಟ-ಪಾಠದ ಸುತ್ತ (ಸಾಮಾಜೀಕರಣದಲ್ಲಿ) ಪ್ರತಿಯೊಂದನ್ನು ಗಹನವಾಗಿ ಗ್ರಹಿಸುತ್ತಾ ತನ್ನೊಳಗೆ ಜ್ಞಾನವನ್ನು ಸಂರಚಿಸಿಕೊಳ್ಳುತ್ತಾ. ಅದನ್ನು ಹೊರ ಜಗತ್ತಿನಲ್ಲಿ ಅನ್ವಯಿಸುತ್ತಾ ತನ್ನಲ್ಲಿ ಗಟ್ಟಿ ಮಾಡಿಕೊಳ್ಳುತ್ತಾ ಹೋಗುತ್ತದೆ. ಅದರಲ್ಲೂ ತನ್ನ ಮನೆಭಾಷೆಯು ಮಗುವಿನ ಕಲಿಕೆಗೆ ಒತ್ತೊತ್ತಾಗಿ ನಿಂತು ಅನೇಕ ಅಂಶಗಳನ್ನು ಪೂರೈಸುತ್ತದೆ. ಈ ನೆಲೆಯಲ್ಲಿ **ಭತೃಹರಿಯು** ಹೇಳುವಂತೆ-"ಭಾಷೆಯು ವಾಸ್ತವ ಜ್ಞಾನವನ್ನು ಸಂರಚಿಸುತ್ತದೆ ಮತ್ತು ವಾಸ್ತವತೆಯನ್ನು ಪರಿಕಲ್ಪನಾತ್ಮಕ ಜೋಡಣೆಯ ಪ್ರಕ್ರಿಯೆಯಲ್ಲಿ ನೋಡಲು ಸಹಕರಿಸುತ್ತದೆ." ಹೀಗಿರುವಾಗ ಮಗು ತನ್ನ ತಾಯಿ ಭಾಷೆಯಲ್ಲಿ ಆಲೋಚನೆ, ಕಲ್ಪನೆ, ಕನಸು, ಆಟ-ಪಾಠ, ಖುಷಿ ಇತ್ಯಾದಿಗಳ ಯಶಸ್ಸಿಗೆ ಕಾರಣ ಮನೆಭಾಷೆ.

ಪ್ರತಿಯೊಂದು ಮಗು ಭಾಷೆಯನ್ನು ಗೊತ್ತಿಲ್ಲದೆ ಸಾಮಾಜಿಕ ಪ್ರಭಾವದಿಂದ ಅನೌಪಚಾರಿಕವಾಗಿ ಸಮಾಜದಲ್ಲಿ ಕಲಿಯುತ್ತದೆ. ಮಗು ಔಪಚಾರಿಕ/ ಶಾಲಾ ಶಿಕ್ಷಣದ ಚೌಕಟ್ಟಿಗೆ ಬಂದಾಗ ಮಗು ಈಗಾಗಲೇ ಕಲಿತ ಭಾಷೆಗೆ ಎಳ್ಳಷ್ಟು ಮಹತ್ವ ನೀಡದೆ ತಿರಸ್ಕರಿಸುತ್ತೇವೆ. ಒಬ್ಬ ಭಾಷಾ ಸುಗಮಕಾರನಾಗಿ ಮನೆ ಭಾಷೆಯನ್ನು ತಿಳಿದುಕೊಳ್ಳುವುದು ಸೂಕ್ತವೆನಿಸುತ್ತದೆ.

ಆದರೆ ನಾನೊಬ್ಬ ಭಾಷಾ ಸುಗಮಕಾರನಾಗಿ ನನ್ನ ಭಾಷಾ ತರಗತಿ ಹೇಗಿರಬೇಕು? ಈ ತರಗತಿಯಲ್ಲಿ ಮಗು ಏನನ್ನು ಕೊಂಡು ಹೋಗಲು ಸಾಧ್ಯ? ನನ್ನ ಈ ತರಗತಿ ಮಗುವಿನ ಭವಿಷ್ಯದಲ್ಲಿ ಧನಾತ್ಮಕವಾದ ಬದಲಾವಣೆಗೆ ಪೂರಕವಾಗಿದೆಯೇ? ಈ ತರಗತಿಯು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹೊಂದಿದೆಯೇ? ಮತ್ತು ಈ ನನ್ನ ತರಗತಿಯು ಮಗುವಿನಲ್ಲಿ ಸಂಶೋಧನೆಯ ಕುತೂಹಲವನ್ನು ಕೆರಳಿಸುವಂತಿದೆಯೇ? ಹೀಗೆ ಅನೇಕ ವಿಷಯಗಳನ್ನು ಈ ತರಗತಿ ಪ್ರಕ್ರಿಯೆಯಲ್ಲಿ ಭಾಷಾ ಸುಗಮಕಾರನ ತಲೆಯಲ್ಲಿ ಗಿಜುತ್ತದೆ.

ಭಾಷಾ ಸುಗಮಕಾರನ ಪಾತ್ರ:

- ಆಯಾ ತರಗತಿಗೆ ಸಂಬಂಧಿಸಿದಂತೆ ಪೂರಕವಾಗಿ ಪಾಠ ಯೋಜನೆ. ಇದು ಮಗುವಿನ ಕಲಿಕೆಗೆ ಅನುಕೂಲಿಸುವಂತಿದ್ದು ಕಲಿಕಾಂಶಗಳು ಮಗುವಿನ ಕಲಿಕೆಯಲ್ಲಿ ಮುಕ್ತವಾಗಿ ತೆರೆದುಕೊಳ್ಳುವಂತಿರಬೇಕು.
- ಸುಗಮಕಾರರು ಪಾಠಕ್ಕೆ ಪೂರಕವಾದ ಪಾಠೋಪಕರಣಗಳನ್ನು ತರಗತಿಯಲ್ಲಿ ಮಕ್ಕಳ ಮುಂದೆಯೇ ಆಯಾ ಪಾಠಕ್ಕೆ ಪೂರಕವಾದ ಪಾಠೋಪಕರಣಗಳನ್ನು ಮಕ್ಕಳ ಎದುರಲ್ಲೇ ಮಾಡುವುದು ಅವರನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರಕವಾಗುತ್ತದೆ.
- ಸುಗಮಕಾರರು ಪಾಠಕ್ಕೆ ಪೂರಕವಾದ ಸನ್ನಿವೇಶಗಳನ್ನು ಸಿದ್ಧ ಮಾಡುವುದು. ಉದಾ: ಹಾಡು, ಕತೆ, ನಾಟಕ, ಇತರೆ ಪ್ರಸಂಗಗಳನ್ನು ತಾನೇ ಮಾಡುವುದರಿಂದ ಮಕ್ಕಳಲ್ಲಿ ಸಾಹಿತ್ಯ, ನಟನೆ, ಅಭಿನಯ ಇತರೆ ಭಾಷಿಕ ಅಂಶಗಳನ್ನು ಬೆಳೆಸಲು ಸಾಧ್ಯವಾದೀತು.
- ಭಾಷಾ ಕಲಿಕೆಯಲ್ಲಿ ಪಾಠಕ್ಕೆ ಪೂರಕವಾದ ಭಾಷಿಕ ಆಟಗಳನ್ನು ತರಗತಿಯಲ್ಲಿ ರಚಿಸುವುದು, ಆಡಿಸುವುದು.
- ಭಾಷಾ ತರಗತಿಯಲ್ಲಿ ಗುಂಪು ಚಟುವಟಿಕೆಗಳು ಬಹುವರ್ಗದ ಮಕ್ಕಳ ಕಲಿಕೆಯಲ್ಲಿ ಪರಿಣಾಮಕಾರಿಯಾಗುತ್ತದೆ. ಇಂತಹ ಕಲಿಕಾ ನೆಲೆಗಳೊಂದಿಗೆ ಭಾಷಾ ಸುಗಮಕಾರನೊಬ್ಬ ವಿಜ್ಞಾನಿಯಾಗಿ ಬಹುಭಾಷೆಯ ಶಬ್ದಗಳನ್ನು ಪರಿಚಯಿಸುತ್ತಾ ಹಲವು ವಿಷಯಗಳನ್ನು ತನ್ನ ಭಾಷಿಕ ವಿಷಯಕ್ಕೆ ಅನ್ವಯಿಸುತ್ತಾ ತರಗತಿಯನ್ನು ವಿನ್ಯಾಸಗೊಳಿಸುವುದರಿಂದ ತರಗತಿಯಲ್ಲಿ ಭಾಷೆಯ ಪ್ರತಿ ಆಯಾಮಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುತ್ತದೆ.

ಉದಾ: ನನ್ನ ಭೇಟಿಯ ಶಾಲೆಯಲ್ಲಿ ಭಾಷಾ ಸುಗಮಕಾರರ ತರಗತಿಯು ಪ್ರಜಾಪ್ರಭುತ್ವದ ಮೌಲ್ಯಗಳ ನೆಲೆಯಲ್ಲಿ



ರೂಪುಗೊಂಡ ಆದರ್ಶ ತರಗತಿಯೆನಿಸಿತು. " ಸುಗಮಕಾರರು ತರಗತಿಗೆ ಪ್ರವೇಶಿಸುತ್ತಿರುವಾಗಲೇ ಮಕ್ಕಳನ್ನು ಹಸನ್ಮುಖಿಯಾಗಿ ಸ್ವೀಕರಿಸುತ್ತಾ ಎಲ್ಲಾ ಮಕ್ಕಳನ್ನು ವೃತ್ತಾಕಾರದಲ್ಲಿ ಕುಳ್ಳಿರಿಸಿ, ತಾನು ಮಕ್ಕಳೊಂದಿಗೆ ಕುಳಿತು ಭಾಷಿಕ ಆಟಗಳೊಂದಿಗೆ ಆಡುತ್ತಾ, ಆ ದಿನದ ಪಾಠಕ್ಕೆ ಬರಮಾಡಿಕೊಂಡರು ಇದು ಮಕ್ಕಳ ಆಸಕ್ತಿಯೊಂದಿಗೆ ಅವರಲ್ಲಿ ಕುತೂಹಲ ಕೆರಳುವಂತೆ ಮಾಡಿತು. ನಂತರ ವೃತ್ತದಲ್ಲಿನ ಮಕ್ಕಳು ಒಬ್ಬೊಬ್ಬರಾಗಿ ಪಾಠಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸುತ್ತಿದ್ದರು. ಹೀಗಿರುವಾಗ ದೊಡ್ಡ ವೃತ್ತದಲ್ಲಿನ ಮಕ್ಕಳನ್ನು ಮೂರು ಸಣ್ಣ ವೃತ್ತಗಳಾಗಿ ವಿಭಾಗಿಸಿ ಅದರಲ್ಲಿ ಒಂದೊಂದು ಗುಂಪಿಗೆ ಒಂದೊಂದು ಮಾಹಿತಿಯನ್ನು ಪೂರೈಸಿದರು. ಆ ಪ್ರಕಾರ ಪ್ರತಿ ಗುಂಪು ತನಗೆ ನೀಡಿರುವ ಜವಬ್ದಾರಿಗಳನ್ನು ಕಲಿಕೆಯ ನೆಲೆಯಲ್ಲಿ ಕಲಿತು ಎಲ್ಲರ ಮುಂದೆ ಪ್ರದರ್ಶಿಸುವಾಗ ಮಕ್ಕಳ ಮುಖದಲ್ಲಿರುವ ಮಂದಹಾಸಕ್ಕೆ ಪಾರವೇ ಇರಲಿಲ್ಲ. ಎಲ್ಲವನ್ನು ಗೆದ್ದ ಭಾವ ಅವರಲ್ಲಿ ನಾನು ನೋಡಿದ ಅನುಭವವಾಗಿತ್ತು. ಈ ನೆಲೆಯಲ್ಲಿ ಈ ತರಗತಿ ನನಗೆ ವಿಶೇಷವೆನಿಸಿತು."

ಈ ಸಂದರ್ಭದಲ್ಲಿ ಭಾಷಾ ತರಗತಿಗಳನ್ನು ಗಮನಿಸುವಾಗ ಎರಡು ಅಂಶಗಳು ಕಣ್ಣಿಗೆ ಕಟ್ಟುವಂತೆ ರಾಚುತ್ತವೆ. ಅವುಗಳಲ್ಲಿ

**1.ಬಹು ಭಾಷಿಕತೆ**: ಭಾಷೆ ಮತ್ತು ಸಮಾಜದ ನಡುವೆ ಅನೇಕ ಸಂಬಂಧಗಳಿರುವುದರಿಂದ ಸಾಮಾಜಿಕ ರಚನೆಯ ಭಾಷಿಕ ವಿನ್ಯಾಸ, ಅವು ಮಗುವಿನ ವರ್ತನೆಯ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ. ಉದಾಹರಣೆಗೆ: ದೊಡ್ಡವರ ಜೊತೆ ಹೆಚ್ಚು ಮಾತು ನಡೆಸುವ ಮಗು ಮಾತನಾಡುವ ಭಾಷೆಯ ಶಬ್ದವನ್ನು ಬಳಸುವುದನ್ನು ನೋಡಿ ಕಲಿಯುತ್ತದೆ. ಹಾಗೆಯೇ ಆ ಸಮಾಜ ಮಕ್ಕಳು ಬಳಸುವ ಬಹುತೇಕ ಶಬ್ದಗಳಿಗೆ ಆಕರವಾಗಿರುತ್ತದೆ. ಇದು ಮಗುವಿನ ಮೇಲೆ ಪ್ರಭಾವ ಬೀರಿರುವುದರಿಂದ ತರಗತಿಯಲ್ಲಿನ ಭಾಷೆಗೆ ಅಡ್ಡಿಯಾಗುತ್ತದೆ. ಮಗು ತಾನು ಕಲಿತ ಭಾಷೆಯನ್ನು ಮುಂದೆ ಕೊಂಡು ಹೋಗಬೇಕೆ? ಅಥವಾ ಬೇಡವೇ? ಎಂಬ ಪ್ರಶ್ನೆಗೆ ಉತ್ತರ ಕಾಣದೆ ಸುಮ್ಮನಾಗಿ ಬಿಡುತ್ತದೆ.


ಹಾಗದರೆ ಭಾಷೆ ಗೊತ್ತಿಲ್ಲದ ಮಗುವಿಗೆ ತರಗತ ಭಾಷೆಯನ್ನು ಕಲಿಸುವುದೇಗೆ? ಎಂಬುದು ಸುಗಮಕಾರನ ಪ್ರಶ್ನೆಯಾಗುತ್ತದೆ.

ತರಗತಿಯಲ್ಲಿ ಭಾಷಿಕ ಸನ್ನಿವೇಶಗಳನ್ನು ಸೃಷ್ಠಿಸುವುದು. ಉದಾ: ಕಿರು ನಾಟಕಗಳನ್ನು ಪ್ರದರ್ಶನ ಮಾಡುವುದು ಇದು ಭಾಷೆಯೇ ಗೊತ್ತಿಲ್ಲದ ಮಗುವಿಗೆ ಸಾಂದರ್ಭಿಕವಾದ ನೆಲೆಯಲ್ಲಿ ಆಯಾ ಸನ್ನವೇಶಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಇಂತಹ ಸಣ್ಣ ಭಾಷಿಕ ಆಟಗಳು ಮಗುವಿನ ಭಾಷೆಯ ಕಲಿಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**2.ವ್ಯಾಕರಣ**: ಪ್ರಾಥಮಿಕ ತರಗತಿಗಳ ಮತ್ತೊಂದು ವಿಶೇಷ ಸವಾಲು ವ್ಯಾಕರಣ! ಇದು ಈ ಹಂತದ ಮಕ್ಕಳಿಗೆ ಕಲಿಸಬೇಕೇ? ಅಥವಾ ಬೇಡವೇ? ಮಗು ಶಾಲೆಗೆ ಬರುವ ಮುನ್ನವೇ ವ್ಯಾಕರಣವನ್ನು ಮಗು ಭಾಷೆಯಲ್ಲಿ ಅಂತರ್ಗತಗೊಳಿಸಿಕೊಂಡು ಶಾಲೆಗೆ ಬಂದಿರುವಾಗ ನಾವು ವ್ಯಾಕರನದಲ್ಲಿ ಏನನ್ನು, ಹೇಗೆ ಕಲಿಸಬೇಕು ಎನ್ನುವುದು ಮೂಲಭೂತವಾಗಿ ಭಾಷಾ ಸುಗಮಕಾರನನ್ನು ಕಾಡುತ್ತದೆ. ಇದು ಶೈಕ್ಷಣಿಕ ಕ್ಷೇತ್ರದಲ್ಲಿ ಜಾಗೃತವಾಗಿ ಚರ್ಚೆಗೆ ಗ್ರಾಸವಾಗಿರುವ ಅಂಶ. ಈ ಹಿನ್ನಲೆ ಪ್ರಾಥಮಿಕ ಹಂತದಲ್ಲಿ ಲಿಂಗ, ವಚನ, ಕಾಲ ಇತರೆ ಸರಳ ಅಂಶಗಳನ್ನು ಕಲಿಸಬೇಕು ಉಳಿದಂಶಗಳನ್ನು ಪ್ರೌಢ ಹಂತದಲ್ಲಿ ಅಥವಾ ಹೆಚ್ಚಿನ ವಿದ್ಯಾಭ್ಯಾಸದಲ್ಲಿ ಕಲಿಯುವುದಕ್ಕೆ ಅವಕಾಶಗಳಿವೆ ಎಂಬುದು ಇತ್ತೀಚಿನ ಅಧ್ಯಯನಗಳು ಸ್ಪಷ್ಟಪಡಿಸುತ್ತವೆ ಹಾಗೂ ಈ ಹಂತದಲ್ಲಿ ಮಗು ವ್ಯಾಕರಣ ಕಲಿಯಲು ಕೆಲವು ಭಾಷಿಕ ರಾಚನಿಕ ಅಂಶಗಳ ಹಿನ್ನಲೆಯಲ್ಲಿ ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ ಎಂಬುವ ಶಂಕರಬಟ್ಟರ ಮಾತು ಈ ಸಂದರ್ಭದಲ್ಲಿ ಹೆಚ್ಚು ಔಚಿತ್ಯಪೂರ್ಣ.

**ಕಾರಣಗಳು**:

- ಕನ್ನಡ ಭಾಷೆಯಲ್ಲಿನ ವ್ಯಾಕರಣ ಸಂಸ್ಕೃತ ಭಾಷೆಯ ಮೂಲವನ್ನು ಹೊಂದಿರುವುದು.
- ಮಗು ಮನೆಭಾಷೆಯಲ್ಲಿಯೇ ವ್ಯಾಕರಣವನ್ನು ಅಂತರ್ಗತಗೊಳಿಸಿಕೊಂಡಿರುವುದು.
- ಭಾಷೆ ಕಲಿಯುವುದಕ್ಕೆ ಯಾವುದೇ ವ್ಯಾಕರಣದ ಅಂಶಗಳು ಪ್ರಭಾವ ಬೀರುವುದಿಲ್ಲ ಅದಕ್ಕೆ ಬದಲಾಗಿ ಸಾಂದರ್ಭಿಕ ಹಿನ್ನಲೆಯಲ್ಲಿ ಮಗು ಭಾಷೆಯನ್ನು ಕಲಿತಿರುತ್ತದೆ.
- ಮಗು ತರಗತಿಯಲ್ಲಿ ಕಲಿತ ವ್ಯಾಕರಣವನ್ನು ಯಾವ ಹೊರ ಜಗತ್ತಿನಲ್ಲಿ ಉಪಯೋಗಕ್ಕೆ ಬಾರದಿರುವುದು ಇದಕ್ಕೆ ಇಂಬು ನೀಡುತ್ತದೆ.



ಹೀಗಾಗಿ ಪ್ರತಿ ಭಾಷಾ ಸುಗಮಕಾರನು ಮಗುವಿನ ಸಾಮರ್ಥ್ಯದ ಮಟ್ಟಕ್ಕೆ ಏರಿ ನಿಂತು ಮಾತನಾಡುವಾಗ ಮಗುವಿಗೆ ಕಲಿಕೆಗೆ ಬೇಕಾದ ಅಂಶಗಳನ್ನಾಧರಿಸಿ ಕಲಿಕೆಗೆ ಸರಳವಾಗುವಂತಹ ಕಲಿಕಾಂಶಗಳನ್ನೇ ಕೇಂದ್ರೀಕರಿಸುವುದರಿಂದ ಮಗುವಿನ ಕಲಿಕೆಯಲ್ಲಿ ಪ್ರಗತಿಯನ್ನು ಸಾಧಿಸುತ್ತಾ ಮಗುವಿನ ಕಲಿಕೆಗೆ ಸ್ವತಂತ್ರ್ಯವನ್ನು ನೀಡುವ ಮೂಲಕ ಅದು ತನ್ನ ಜ್ಞಾನವನ್ನು ಕಟ್ಟಿಕೊಳ್ಳಲು ಅವಕಾಶ ಒದಗಿಸಬೇಕು ಹೀಗೆ ಸಂವಿಧಾನ ನೆಲೆಯಲ್ಲಿ ತರಗತಿಯಲ್ಲಿ ಅವಕಾಶ ನೀಡುವುದರಿಂದ ಮಗುವಿನ ಕಲಿಕೆಯು ಹೆಚ್ಚು ಪ್ರಭಾವಶಾಲಿಯಾಗುತ್ತದೆರೀ ನೆಲೆಯಲ್ಲಿ ಮಗುವನ್ನು ನೋಡುವಾಗ ಒಬ್ಬ ಭಾಷಾ ಸುಗಮಕಾರ ಕೇವಲ ಭಾಷೆಯನ್ನು ಮಾತ್ರ ಕಲಿಸುವುದಿಲ್ಲ ಜೊತೆಗೆ ವಿಷಯಗಳಾದ ಸಮಾಜ, ವಿಜ್ಞಾನ, ಗಣಿತ, ಪರಿಸರ ಇತರೆ ವಿಷಯಗಳ ಕಲಿಕೆಯಲ್ಲೂ ನೆರವಾಗುತ್ತಾನೆ. ಹಾಗಾಗಿ ಭಾಷಾ ಕಲಿಕೆಯು ಇತರೆಲ್ಲಾ ವಿಷಯಗಳ ಕಲಿಕೆಗೆ ನೆರವಾಗುವುದರಿಂದ ಮನೆಭಾಷೆಗೆ ತರಗತಿಭಾಷೆಯ ಕಲಕೆ ಪೂರಕವಾಗಿರಬೇಕು ಹೀಗಾದಾಗ ಯಾವ ತಡೆಯಿಲ್ಲದೆ ಮಗುವಿನ ಕಲಿಕೆಯಲ್ಲಿ ಯಶಸ್ಸು ಸಿಗುತ್ತದೆ.

## ಬಿಂದು- 5 –ರಕ್ಷಿತ್ ಅರುಣ್

ಸುಡುಬಿಸಿಲ ತಾಪವಿದು ಧರೆಯೊಡಲು

ಸುಡುತಿದೆ...

ಹಣೆಯ ಮೇಲಿನ ಬೆವರು ಝರಿಯಂತೆ

ಹರಿದಿದೆ...

ನೀರಿನಾ ನೆಲೆಗಳು ಬರಿಗಾಗಿ ಆಗಸವ

ನೋಡಿವೆ...

ಹಸಿರು ಹುಲ್ಲಿನ ಹಾಸದು ಧಗೆಯಿಂದ

ಬಾಡಿವೆ...

ಇದ್ದೊಂದು ಭೂಮಿ ಉಳಿಸಲಾರದ

ಮನುಜನು...

ಬೇರಾವುದೋ ಗ್ರಹದಲಿ ನೀರ ನೆಲೆ

ಅರಸಿಹನು...

ಇದು ಮತ್ತೇನು ಅಲ್ಲವೋ ಪ್ರಳಯದಾ

ಸೂಚನೆ...

ಇನ್ನಾದರೂ ಮಾಡೋಣ ಕಾಡನ್ನು ಉಳಿಸೊ

ಯೋಚನೆ...

******



## A Visit to Nana Layja -Krithi Satish Koppal

Nana Layja is a small village in Kutch District, Gujarat. My friends and I had a tremendous experience which can't be expressed through words because I fall short of words to express it. It is one such village where women are restricted only to their house premises and farm.

It was a tough journey for all. During all those days of our stay, we did not even have the basic amenities. But we learned to live and lead our life in a very simple manner. That journey really equipped each one of us to face the life with smile and acceptance.

In the initial days, we neither could see any women in the streets nor in the tea-stalls. They didn't even come to sell the milk at tea stalls. We people from different geographical location were the only ladies roaming around the village without any hesitation.


There came a time when people felt weird that these girls are going to spoil our girls. At that time we used to make fun out of it saying" if we say we are going to give the dowry of 2 crores also these people would not marry us".
It has turned out to be a lifetime memorable achievement of all those visited like a dream come true.

## ಬಿಂದು- 6 ರಕ್ಷಿತ್ ಅರುಣ್

ಗಾಳಿ ಮಾತಿನ ಹುಚ್ಚು ಸಂಬಂಧಗಳ ಸುಟ್ಟಿತು
ನಂಬಿಕೆಯ ಹಕ್ಕಿ ಗೂಡನ್ನೇ ಬಿಟ್ಟಿತು
ಸಂಚಿನಾ ಸಂಕೋಲೆ ಉರುಳಾಯ್ತು ಸ್ನೇಹಕೆ
ಕಳೆದ ಹಳೆ ನೆನಪುಗಳೇ ನೆಲೆಯಾಯ್ತು ಜೀವಕೆ

ನೆರಳಂತೆ ಇದ್ದವರು ಇಂದೇಕೊ ದೂರ
ನೆಪಗಳ ಸರಪಳಿ ಹೆಚ್ಚಿಸಿದೆ ಭಾರ
ಬಿಡುಗಡೆ ಎಂದೋ ಈ ಸಂಕಟದಿಂದ
ಬರಿ ಮಾತಾಗಿ ಉಳಿಯಿತೇ ಬಿಡಿಸದಾ ಬಂಧ?

*****



## ಮಾ(ನ)ಸದ ಪ್ರೀತಿ - ಅವಿನಾಶ್ ಹೊಸಪೇಟೆ

ಅತಿಯಾಗಿ ಪ್ರೀತಿಸೊ
ಏಕಾಂಗಿ ಪ್ರೀತಿಯೇ ಸುಂದರ
ಪ್ರೀತಿಸುವ ಹೃದಯಗಳ ನಡುವಿನ ಅಂತರ
ಮನಸ್ಸು ಬಯಸುವುದು ಮತ್ತಷ್ಟು ಕಾತರ...

ಬದುಕು ಅಶಾಶ್ವತವಾದ ಸುಖ ದುಃಖಗಳ
ಸಾಗರ; ಈಜಿದಷ್ಟು ಮುಂದೆ ಸಾಗುವುದು.
ಬದುಕಿನುದ್ದಕ್ಕೂ ಪ್ರೀತಿಯ ಪರ್ಯಾಯಗಳೆಷ್ಟೊ
"ಎರಡು ನಿರ್ಮಲ ಮನಸ್ಸಿನ, ಸಿಹಿ ಹೃದಯದ
ಅನುಭವ ವಿನಿಮಯ ಭಾವತರಂಗ ಈ ಪ್ರೀತಿ"

ಪ್ರೀತಿಯೆಂಬುದು ಪರಿಶುದ್ಧ ಹೂಮೊಗ್ಗಿನಂತೆ
ಸೂರ್ಯನ ಕಿರಣ ಸೋಕಿದಾಗಲೆ ಅರಳಿ ನಲಿಯುವುದು
ಈ ಪ್ರೀತಿ ಆಕರ್ಷಣೆಯು ಅಲ್ಲ ಅವಲಂಬನೆಯೂ ಅಲ್ಲ


ಒಮ್ಮೆ ಹೃದಯದ ಬಾಗಿಲ ತಟ್ಟಿನೋಡು
ಅಲ್ಲಿರೊ ಸಿಂಹಸನದಲ್ಲಿ ಕುಳಿತಿರುವ ಪ್ರತಿಬಿಂಬ
ನೀನೆ ಅಲ್ಲವೇನು; ಕಾಯುತ್ತಿರುವೆ ನಾನು
ಒಮ್ಮೆಯಾದರು ಒಪ್ಪಿಕೋ ಎಂದು
ಕೇಳುವ ಸ್ವಾರ್ಥ ಮನಸ್ಸು ನನ್ನದಾಗಿದೆ ಇಂದು...

### ಬಿಂದು-7

ಕತ್ತಲ ರಾತ್ರಿಯಲಿ
ಅವನೊಬ್ಬ ಜೊತೆಗಿದ್ದನೆಂಬ ನಂಬಿಕೆ
ನನ್ನ ಯೋಚನೆಗೆ ಕಿವಿಗೊಡುವ
ಅವನೊಂದಿಗೆ ನನ್ನ ಹೊಂದಿಕೆ
ಕಾಲದ ಕಾಲ್ತುಳಿತದಲಿ ಅವನು ಅಸುನೀಗಿದ
ಮೇಲೆ.....
ಅಪರಿಚಿತರೆಲ್ಲರ ಆಲೋಚನೆಗಳು ನನ್ನ
ಮೇಲೆ......

ಇಷ್ಟು ವರುಷ ನನ್ನ ಜೊತೆಗಿದ್ದವ ನನ್ನ ಮನವಂತೆ
ಅವನ ಮಾತನು ಕೇಳಿಯೂ ಕೇಳದೆ
ನಾ ನಿಂತೆ
ನನ್ನ ಈ ಬದಲಾವಣೆಗೆ ಅವನಾದ ಕಲ್ಲು
ಗೊಂಬೆ......
ಈಗ ಅವನಿಲ್ಲದೆ ನಾನು ಕಾಲದ ಕೈಲಿ
ಕಂಡವರ ಗೊಂಬೆ......

*****



## ತಮಂಧದ ಕೇಡು ಮತ್ತು ಬುದ್ಧ ಹಚ್ಚಿದ ಪ್ರಣತಿ -ಪುಷ್ಪಾ ಪಿ. ಕಾಮತ್

**ಇಡೀ ಜಗತ್ತು ಮೂರನೇ ಮಹಾಯುದ್ಧದ ಹೊಸ್ತಿಲಲ್ಲಿದೆ. ಯುದ್ಧದ ದ್ವೇಷ ಮತ್ತು ಕೇಡು ತಮಂಧವಾಗಿ ಜಗವ ಮುತ್ತಿರುವಾಗ ಪ್ರೀತಿ ಮತ್ತು ಶಾಂತಿಯ ಬೆಳಕು ಬುದ್ಧಜ್ಞಾನದ ಅಗತ್ಯವಿದೆ. ಈ ಯುದ್ಧೋನ್ಮಾದದ ಈ ಹೊತ್ತಲ್ಲಿ ಆಂತರ್ಯದ ಯುದ್ಧವನ್ನು ಗೆಲ್ಲುವ ಬಗೆ ಹೇಳಿದ ಗೌತಮನ ಕುರಿತ ಒಂದು ಧ್ಯಾನ.**

ಬುದ್ಧನೆಂದರೆ ಬೆಳಕು. ಅರಿವಿನ ಪ್ರಣತಿ. ಆತ ತನ್ನ ಬೋಧನೆಗಳ ಮೂಲಕ ಅರಿವಿನ ಬೆಳಕನ್ನು ಹೊತ್ತಿಸಿದವನು. ಜಗದ ವಿಕೃತಿಯ ಕತ್ತಲ ದಾರಿಯ ನಡಿಗೆಗೆ ಪ್ರೀತಿಯ ಪಂಜಿನ ಕಂದೀಲು ಕೊಟ್ಟವನು. ಅರಿವು ಮತ್ತು ವಿಚಾರದ ತೇಜಸ್ಸಿನಲ್ಲಿ ಬದುಕನ್ನು ನೋಡುವುದನ್ನು ಕಲಿಸಿದವನು. ಮಾನವೀಯ ಅಂತಃಕರಣ ಮತ್ತು ಸಹಾನುಭೂತಿಯನ್ನು ಪ್ರತಿ ಜೀವಿಯ ಎದೆಯೊಳಗೆ ಕಂಡುಕೊಳ್ಳುವ ಬಗೆ ತೋರಿದ ಜೀವಸಖ ಅವನು. ಜನರ ದುಃಖದ ಕಡಲಿಗೆ ಶಾಂತಿಯ, ನಿರ್ಮೋಹದ ಹಾಯಿ ದೋಣಿಯ ನೀಡಿದ ಆತ, ಮನುಷ್ಯನ ನೋವು ಮತ್ತು ಹತಾಶೆಯನ್ನು ಮೀರುವ ದಾರಿ ತೋರಿದ. ಹಾಗಾಗಿಯೇ ಆತ ಅರಿವಿನ ಬೆಳಕು ಕಂಡ ಮತ್ತು ಇತರರಿಗೆ ಕಾಣಿಸಿದ ಬುದ್ಧ. 'ಬುದ್ಧ' ಎನ್ನುವ ಪದಕ್ಕೆ ಇರುವ ನಿಘಂಟಿನ ಅರ್ಥವೂ ಅದೇ; 'ಬುದ್ಧಿಯನ್ನು ಆಧಾರವಾಗಿ ಹೊಂದಿದವನು', 'ಜ್ಞಾನವನ್ನು ಆಧಾರವಾಗಿ ಹೊಂದಿದವನು' ಎಂದು.

ಆತ ಮಹಾನ್ ಗುರುವಾಗಿದ್ದ. ರಾಜರಿಂದ, ಸೇನಾನಿಗಳಿಂದ ವಂದಿಸಲ್ಪಡುತ್ತಿದ್ದ, ಹೆಚ್ಚಾಗಿ ಮನುಷ್ಯರ ಸೇವೆಯಲ್ಲಿ ನೆಮ್ಮದಿ ಕಾಣುತ್ತಿದ್ದ. ಅದು ತನ್ನೆಲ್ಲಾ ಉಪದೇಶಗಳಿಗಿಂತ ಮಿಗಿಲಾದುದುದೆಂದು ಅರಿತಿದ್ದ ಬುದ್ಧ, ಜನಮುಖಿಯಾಗಿದ್ದ, ಜೀವನ್ಮುಖಿಯಾಗಿದ್ದ. ಶಾಂತಿಯನ್ನು ಬೋಧಿಸಿದ. 'ಆಸೆಯೇ ದುಃಖಕ್ಕೆ ಮೂಲ', 'ಸಾಸಿವೆ ತರಹೇಳಿದ ಕಿಸಾಗೌತಮಿ', 'ಹಿಂಸಾ ಪ್ರತಿರೂಪ ಅಂಗುಲಿಮಾಲ' 'ಗಣಿಕ ಸ್ತ್ರೀಯಾಗಿ ಬುದ್ಧನನ್ನು ಅನುಸರಿಸಿದ ಅಮ್ರಪಾಲಿ'ಯಂತಹ ಕಥೆಗಳಲ್ಲಿ ಕಂಡ ಬುದ್ಧನನ್ನು ಮಾತ್ರ ನಾವು ಬಲ್ಲೆವು. ಅದರ ಹೊರತಾಗಿ ಬುದ್ಧನ ಕುರಿತ ಇನ್ನಾವ ವಿಚಾರಗಳನ್ನೂ ನಮ್ಮ ಶಿಕ್ಷಣ ವ್ಯವಸ್ಥೆಯಾಗಲೀ, ಅಕಾಡೆಮಿಕ್ ಚರಿತ್ರೆಯಾಗಲೀ ಕಾಣಿಸಲಾರದು.

ವೈಶಾಖ ಶುದ್ಧ ಪೂರ್ಣಿಮೆಯಂದು ಅರಮನೆ, ಮತ್ತು ಅದರ ಎಲ್ಲಾ ಸುಖ- ಸಂಪತ್ತನ್ನು ತೊರೆದನು ಎನ್ನುವುದು ಕೂಡ ಹೀಗೆ ಬುದ್ಧನ ಕುರಿತ ಕಥೆಗಳೇ ಹೇಳಿಕೊಟ್ಟ ಸಂಗತಿ. ಹಾಗೆ ಆತ ಸುಪ್ಪತ್ತಿಗೆಯ ಬದುಕು ತೊರೆದು ಹೋಗಲು ಕಾರಣ, ರೋಗ, ಮುಪ್ಪು, ಸಾವುಗಳು ಎಂದೇ ನಾವು ನಂಬಿಕೊಂಡುಬಂದಿದ್ದೇವೆ. ಕನಿಷ್ಠ ಅವು ಸಾಂಕೇತಿಕವಷ್ಟೇ ಎಂಬುದನ್ನು ಕೂಡ ನಾವು ಮರೆಯುತ್ತಿದ್ದೇವೆ. ಆದರೆ ಈ ಸಂಕೇತಗಳನ್ನು, ನೆಪಗಳನ್ನೂ ಮೀರಿದ ಆಚೆಯ ಸತ್ಯವನ್ನು ಅರಿಯುವ ಮಟ್ಟಿಗಿನ ವ್ಯವಧಾನ ಕಳೆದುಕೊಂಡಿದ್ದೇವೆ. ನಿಜದ ಹುಡುಕಾಟವನ್ನೇ ಮರೆತಿದ್ದೇವೆ. ಬುದ್ಧನ ಬದುಕಿನ ಅಸಲೀ ಸತ್ಯಗಳನ್ನು ಹೇಳುವ ಅಂಬೇಡ್ಕರ್, ಕೊಸಾಂಬಿಯವರ ಸಂಶೋಧನಾತ್ಮಕ ಬರಹಗಳನ್ನೂ ನೆನೆಯದಿರುವುದು, ಪುರಾಣ ಕಥೆಯನ್ನೇ ಚರಿತ್ರೆ ಎಂದು ಬೋಧಿಸುವ ಇತಿಹಾಸ ಪಠ್ಯಗಳು ನಿಜಕ್ಕೂ ನಾಚಿಕೆಗೇಡಿನ ಸಂಗತಿ.

ಅಂಬೇಡ್ಕರರ 'ಬುದ್ಧ ಮತ್ತು ಆತನ ಧರ್ಮ', ಡಿ.ಡಿ. ಕೊಸಾಂಬಿಯವರ 'ಭಗವಾನ್ ಬುದ್ಧ' ಕೃತಿಗಳು ಸಂಶೋಧನಾತ್ಮಕ ವಿವರಗಳೊಂದಿಗೆ ಮಹಾಗುರುವಿನ ಕುರಿತ ವಿಶಿಷ್ಟ ಮಾಹಿತಿಯನ್ನೂ, ಚರಿತ್ರೆಯ ಮಹತ್ವದ ಸಂಗತಿಗಳನ್ನೂ ಹೊಂದಿವೆ. ಆದರೆ, ನಾವು ಈಗಲೂ ಓದುತ್ತಿರುವುದು ಮತ್ತು ಬೋಧಿಸುತ್ತಿರುವುದು ಕಟ್ಟುಕಥೆಗಳನ್ನೇ. ಹಾಗಾಗಿಯೇ ಬುದ್ಧನ ಗೃಹತ್ಯಾಗಕ್ಕೆ ಕಾರಣಗಳನ್ನು ಸುಲಭವಾಗಿ ಆರೋಪಿಸಲಾಗಿದೆ. ಹಾಗೆ ಈವರೆಗೆ ಆರೋಪಿಸಿರುವ ಕಾರಣಗಳನ್ನು ನಂಬಲಿಕ್ಕೆ ಅಸಾಧ್ಯವಾದರೂ ಅದನ್ನೇ ಪಠ್ಯಪುಸ್ತಕಗಳಲ್ಲೂ ಕಲಿಸಲಾಗುತ್ತಿದೆ. ಇದೇ ವಿಪರ್ಯಾಸ! ಸತ್ಯ ಮತ್ತು ಅಹಿಂಸೆಯನ್ನು ಬೋಧಿಸಿದ ಬುದ್ಧನ ಜೀವನದ ಕುರಿತು ಕೂಡ ನಾವು ಸುಳ್ಳಿನ ದಿಬ್ಬ ಪೇರಿಸಿದ್ದೇವೆ. ಕಲ್ಪನೆಯ, ಕಟ್ಟುಕತೆಗಳ ಕಂದರ ಸೃಷ್ಟಿಸಿದ್ದೇವೆ. ಈ ದಿಬ್ಬ- ಕಂದಕಗಳ ಆಚೆ ಆತನ ಬದುಕಿನ ಸತ್ಯದ ವಿಸ್ತಾರಬಯಲಿದೆ. ಆದರೆ, ದಿಬ್ಬ-ಕಂದಕಗಳು ಆ ಸ್ಫಟಿಕಸದೃಶ ಸತ್ಯದ ಬಯಲನ್ನು ಮುರೆಮಾಚಿವೆ.

ನೀರ ಹಾದಿಯ ನೆಮ್ಮದಿ:

ಶಾಂತಿಯ ಕುರಿತು ಮಾತನಾಡುವಾಗ ನಾವು ಉದ್ಧರಿಸುವ, ಉದಾಹರಿಸುವ ಮೊದಲ ಹೆಸರೇ ಬುದ್ಧ. ಬುದ್ಧ ಶಾಂತಿಯನ್ನು ಅರಸಿಯೇ ತನ್ನ ಗೃಹತ್ಯಾಗ ಮಾಡಿದ ಮತ್ತು ಅದಕ್ಕಾಗಿಯೇ ಮಹಾನ್ ಎನಿಸಿಕೊಂಡವ. ಶಾಕ್ಯರು ಮತ್ತು ಕೋಲಿಯರ ನಡುವೆ ರೋಹಿಣಿ ನದಿ ನೀರಿನ ಹಂಚಿಕೆಯಲ್ಲಿ ಉಂಟಾದ ವೈಮನಸ್ಯ ಯುದ್ಧಕ್ಕೆ ತಿರುಗಿದ್ದೇ ಆತನ ಗೃಹತ್ಯಾಗಕ್ಕೆ ಕಾರಣ. ಇಪ್ಪತ್ತು ವರ್ಷದ ಸಿದ್ಧಾರ್ಥನು ಶಾಕ್ಯ ಸಂಘದ ಸದಸ್ಯನಾಗಿದ್ದ. ಶಾಕ್ಯ ಸಂಘದ



ಸದಸ್ಯರು ನದಿ ನೀರಿಗಾಗಿ ಕೋಲಿಯರ ವಿರುದ್ಧ ಯುದ್ಧ ಸಾರಲು ಮುಂದಾದಾಗ ಸಿದ್ಧಾರ್ಥ ಆ ಯುದ್ಧ ವಿರೋಧಿಸಿದ. ಶಾಕ್ಯ ಸಂಘದ ತೀರ್ಮಾನವನ್ನು ವಿರೋಧಿಸುವುದು ಸಂಘದ ವಿರೋಧಿ ನಿಲುವು ಎಂದು ಸಂಘವು ಆತನಿಗೆ ಮೂರು ವಿಧದ ಶಿಕ್ಷೆ ವಿಧಿಸುತ್ತದೆ. ಸೈನ್ಯ ಸೇರಿ ಎಲ್ಲರಂತೆ ಯುದ್ಧ ಮಾಡುವುದು, ಗಡೀಪಾರು ಇಲ್ಲವೇ ಬಹಿಷ್ಕಾರ, ಜೀವಾವಧಿ ಶಿಕ್ಷೆ ಅಥವಾ ಮರಣದಂಡನೆ ಶಿಕ್ಷೆಗಳಲ್ಲಿ ಒಂದನ್ನು ಆಯ್ದುಕೊಳ್ಳುವಂತೆ ಸಿದ್ಧಾರ್ಥನಿಗೆ ಸೂಚನೆ ನೀಡಲಾಗಿತ್ತು. ಸಿದ್ಧಾರ್ಥ ಈ ಮೂರು ಶಿಕ್ಷೆಗಳಲ್ಲಿ ಗಡೀಪಾರಿನ ಶಿಕ್ಷೆಯನ್ನು ಆಯ್ದುಕೊಳ್ಳುತ್ತಾನೆ. ಯುದ್ಧ ಮತ್ತು ಹಿಂಸೆಯನ್ನು ವಿರೋಧಿಸಿ ಮನೆ ತೊರೆದು ಬಂದ ಸಿದ್ಧಾರ್ಥ ನಮ್ಮಲ್ಲಿ ಹಲವರಿಗೆ ಪರಿಚಯವೇ ಇಲ್ಲ.

ಬಾಹ್ಯ ಜಗತ್ತಿನ ಯುದ್ಧ ವಿರೋಧಿಸಿದ ಸಿದ್ಧಾರ್ಥ, ಆಂತರ್ಯದ ಯುದ್ಧವನ್ನು ಗೆದ್ದು ಬುದ್ಧನಾದ. ಎದೆಯ ಅಂತಃಕರಣದ ದನಿಗೆ ಕಿವಿಗೊಟ್ಟು ಅರಮನೆ, ಅಧಿಕಾರ, ಸುಖ-ಸಂಪತ್ತನ್ನಷ್ಟೇ ಅಲ್ಲದೆ, ಸಂಸಾರವನ್ನೂ ತೊರೆದು ಅರಿವನ್ನು ಹುಡುಕಿ ನಡೆದ. ಹೀಗೆ ಅರಿವನ್ನು ಹುಡುಕಿ ಹೊರಟವನು ಆತನ ಹಿಂದಿನ ಋಷಿಮುನಿಗಳಂತೆ ಕಾಡಿಗೆ ಹೋಗಲಿಲ್ಲ. ಬದಲಾಗಿ ಮನುಷ್ಯರ ಬಳಿ ಹೋದ. ಸಮಾಜಮುಖಿಯಾದ. ಸಂಕುಚಿತ ಸಾಮಾಜಿಕ ವ್ಯವಸ್ಥೆಯಲ್ಲಿರುವ ಸಮಸ್ಯೆಗಳ ನಿವಾರಣೆಗೆ ದಾರಿ ಹುಡುಕತೊಡಗಿದ. ಸತ್ಯವನ್ನು ಕಾಣಲು ದೇಹದಂಡಿಸಿ ತಪಸ್ಸು ಮಾಡಿದ. ಆ ಸ್ಥಿತಿಯಿಂದ ಜ್ಞಾನೋದಯವಾಗಲಿಲ್ಲ. ದೇಹದಂಡನೆಯಿಂದ ತನ್ನ ಸಮಕಾಲೀನ ಬದುಕನ್ನು ಕಾಡುತ್ತಿರುವ ಸಮಸ್ಯೆ ನಿವಾರಣೆ ಅಸಾಧ್ಯವೆಂದು ಅರಿತು, ಸತ್ಯಶೋಧನೆಯ ಮಾರ್ಗ ಬದಲಿಸಿದ. ಮನುಷ್ಯ ತನ್ನ ಬಡತನ, ರೋಗ, ಸಾವು, ನೋವು, ಅನ್ಯಾಯಗಳನ್ನು ಗೆಲ್ಲುವ ಸಾಧ್ಯತೆಗಳನ್ನು ಹುಡುಕತೊಡಗಿದ. ನಿರ್ವಾಣ, ಮೋಕ್ಷ ಸಾಧ್ಯವೇ ಎಂದು ನೋಡಿದ. ಕೊನೆಗೂ ಆತ ಹುಟ್ಟಿದ ದಿನವೇ; ವೈಶಾಖ ಶುದ್ಧ ಪೂರ್ಣಿಮೆಯಂದು ತನ್ನ ಹುಡುಕಾಟಕ್ಕೆ ಉತ್ತರ ಕಂಡುಕೊಂಡ. ಇತರರು ಅದನ್ನು ಜ್ಞಾನೋದಯ ಎಂದರು. ಮನುಷ್ಯ ದುಃಖಕ್ಕೆ ಕಾರಣವನ್ನೂ, ದುಃಖದಿಂದ ಬಿಡುಗಡೆಯ ಮಾರ್ಗವನ್ನೂ ಕಂಡುಕೊಂಡ ಗೌತಮ, ಬುದ್ಧನಾದ.

ಸಮಾಜಮುಖಿ ಹೆಜ್ಜೆ:

ಬಳಿಕ ತಾನು ಕಂಡುಕೊಂಡ ಅರಿವನ್ನು ಮುಚ್ಚಿಟ್ಟುಕೊಳ್ಳದೇ; ಎಲ್ಲರೊಂದಿಗೆ ಹಂಚಿಕೊಳ್ಳಲು ಜನರ ನಡುವೆ ಹೋದ. ದೇಶ ಸಂಚಾರ ಮಾಡುತ್ತಾ ಜನರಿಗೆ ತಾನು ಕಂಡುಕೊಂಡ ಸರಳ ಸತ್ಯಗಳನ್ನು, ವಿಚಾರಗಳನ್ನ ಬೋಧಿಸಿದ. ದುಃಖಕ್ಕೆ ಕಾರಣ ಹುಡುಕಿ ಹೊರಟ ಆತ, 'ಆಸೆಯೇ ದುಃಖಕ್ಕೆ ಮೂಲ' ಎಂದು ಅರಿತ ಮತ್ತು ಅದನ್ನೇ ಬೋಧಿಸಿದ. ತನ್ನ ಅನುಭವಗಳನ್ನು ಅರಿವು ಬಯಸಿಬಂದವರಿಗೆ ಧಾರೆ ಎರೆದ. ನೀತಿ, ನೈತಿಕತೆ, ವಿನಯ, ಪ್ರಾಮಾಣಿಕತೆ, ಸಹಾನುಭೂತಿಯ ಮಹತ್ವ ಸಾರಿದ. ತಪ್ಪಿತಸ್ಥರನ್ನು ಶಿಕ್ಷಿಸುವುದರಿಂದ ಅಪರಾಧಗಳು ಕಮ್ಮಿಯಾಗುವುದಿಲ್ಲ ಎಂದ ಬುದ್ಧ "ಬಡತನದ ನಿವಾರಣೆಯಾದರೆ ಮಾತ್ರ ಅಪರಾಧ, ಕ್ರೌರ್ಯ, ಅನ್ಯಾಯಗಳು ಹೋಗುತ್ತವೆ" ಎಂಬ ಸರಳ ಸಾಮಾಜಿಕ ಸತ್ಯವನ್ನು ಸಾರಿದ. ಪಂಚಶೀಲ ತತ್ವಗಳನ್ನು ಬೋಧಿಸಿದ. ಅರಮನೆ, ದೇವಾಲಯಗಳನ್ನು ಬಿಟ್ಟು ನಿರ್ವಾಣಕ್ಕಾಗಿ ಹುಡುಕಾಡಿದ ಬುದ್ಧ, ದೇವರನ್ನು ಹುಡುಕಿ ಭಕ್ತಿ ಮಾರ್ಗ ತುಳಿಯದೆ, ಪ್ರೀತಿಯನ್ನು ಹುಡುಕಿ ಅಂತಃಕರಣದ ಮಾರ್ಗ ತುಳಿದ. ಹಾಗಾಗಿ, ಕಾಣದ ದೇವರ ತಲುಪದೆ, ಸಹಜೀವಿಗಳಾದ ಮನುಷ್ಯರನ್ನು ತಲುಪಿದ್ದ. ಮನುಷ್ಯರ ನೋವು, ದುಃಖಗಳಿಗೆ ಆತನಲ್ಲಿ ದೊರೆಯಬಹುದಾದದ್ದು ಪ್ರೀತಿ ಮಾತ್ರವೇ ಆಗಿತ್ತು.

ದಕ್ಷತೆ, ಶಿಸ್ತಿಗೆ ಹೆಸರಾಗಿದ್ದ ಬುದ್ಧ "ವಿಶ್ವಾಸ, ಪ್ರೀತಿ ಇದ್ದಲ್ಲಿ ಮಾತ್ರ ಶಿಸ್ತು ಸಾಧ್ಯ" ಎಂದು ಹೇಳಿದ. ನಿನ್ನ ಬುದ್ಧಿಯ ಬಗ್ಗೆ ಹೆಮ್ಮೆ ಪಡು, ವಿಶ್ಲೇಷಣೆ ಮಾಡು, ಮೂಢತನವನ್ನು ಒಳಗೊಂಡಿರುವ ಅಭ್ಯಾಸಗಳನ್ನು ಆಚರಿಸಬೇಡ, ಮೂಢನಂಬಿಕೆಗಳನ್ನು ತೊರೆ ಎಂದ ಆತ, ಆತ್ಮವೆಂಬುದೇ ಇಲ್ಲ ಎಂದು ಹೇಳಿ, ಅನಾತ್ಮನ್ ಎನಿಸಿಕೊಂಡ. ದೇವರನ್ನೇ ನಿರಾಕರಿಸಿದ. ಚಾತುರ್ವರ್ಣ ಹಾಗೂ ಜಾತಿ ಪದ್ಧತಿಯನ್ನು ವಿರೋಧಿಸಿದ. ಬುದ್ಧನ ಪ್ರಕಾರ "ಧರ್ಮದ ಮೂಲವಿರುವುದು ದೇವರೊಂದಿಗಿನ ಮನುಷ್ಯನ ಸಂಬಂಧದಲ್ಲಿ ಅಲ್ಲ. ಅದು ಮನುಷ್ಯ ಮನುಷ್ಯರ ನಡುವಿನ ಸಂಬಂಧದಲ್ಲಿ ಇದೆ. ಎಲ್ಲರೂ ಸುಖವಾಗಿರುವಂತೆ ಪ್ರತಿ ಮನುಷ್ಯ ಮತ್ತೊಬ್ಬ ಮನುಷ್ಯರೊಂದಿಗೆ ಹೇಗೆ ವರ್ತಿಸಬೇಕು ಎಂಬುದನ್ನು ಬೋಧಿಸುವುದೇ ಧರ್ಮದ ಉದ್ದೇಶ".

ಆಸೆಯೇ ದುಃಖದ ಮೂಲ ಎಂಬ ಅರಿವು ಕೊಟ್ಟ ಬುದ್ಧ, ಆಸೆಯ ಪರಾಕಾಷ್ಠೆಯ ವಿಕೃತಿಯಾದ ಯುದ್ಧದ ಕುರಿತು ಹೇಳುತ್ತಾ, "ಯುದ್ಧ ಎಲ್ಲಿ ಅನಿವಾರ್ಯ ಮತ್ತು ಎಲ್ಲಿ ಅನಾವಶ್ಯ ಅನ್ನುವುದು ಮೂಲಭೂತವಾದ ಪ್ರಶ್ನೆ. ನೀವು ಯಾರನ್ನು ವೈರಿ ಅಂತ ಕರಿಯುತ್ತಿರೋ ಅವರೊಂದಿಗೆ ಯುದ್ಧ ಮೂಲವಾದ ಸಮಸ್ಯೆಯನ್ನು ಪರಸ್ಪರ ಮಾತುಕತೆ ಮೂಲಕ ಪರಿಹರಿಸಿಕೊಳ್ಳುವ ವಿಶ್ವಾಸಕ್ಕೆ ಮುಂದಾಗಬೇಕಾದ ಪರಿಜ್ಞಾನವಿದ್ದರೆ ಯುದ್ಧದ ಭೀತಿ ನಮ್ಮನ್ನೆಂದೂ ಕಾಡುವುದಿಲ್ಲ. ಈ ಪರಿಜ್ಞಾನದ ಜೀವಾಳವೇ ಯಾವುದೇ ಜೀವವನ್ನು ಪ್ರೀತಿಸುವ ಜೀವನ ಪ್ರೀತಿ" ಎನ್ನುತ್ತಾನೆ. ಭೂಮಿ ಮೇಲಿನ ಪ್ರತಿಯೊಂದು ಜೀವಿಯೂ ಮತ್ತೊಂದರೊಂದಿಗೆ ಸಹಜೀವನ ನಡೆಸಬೇಕಿದೆ. ಅಂತಹ ಸಹಜೀವನಕ್ಕೆ ಪರಸ್ಪರ



ಪ್ರೀತಿಯೇ ಬುನಾದಿ. ಜೀವವಿರುವ ಮತ್ತು ಜೀವವಿಲ್ಲದ ಎಲ್ಲವೂ ಪ್ರಕೃತಿಯಲ್ಲಿ ಒಂದನ್ನೊಂದು ಅವಲಂಬಿಸಿವೆ. ಇತರರ ಸಹಕಾರವಿಲ್ಲದ ನಾವು ಬದುಕಲು ಸಾಧ್ಯವಿಲ್ಲ. ಹೀಗಿದ್ದಾಗ ಸ್ವಾರ್ಥವನ್ನು ಮೈಗೂಡಿಸಿಕೊಂಡರೆ ಪ್ರಯೋಜನವೇನು ಎನ್ನುತ್ತಾನೆ ಬುದ್ಧ. ಹೀಗೆ ಆತನ ಪ್ರತಿ ಅರಿವಿನ ಮಾತೂ ಪ್ರೀತಿಯ ಸುತ್ತಲೇ ಸುತ್ತುತ್ತದೆ. ಜೀವಪ್ರೀತಿಯ ಲವಲೇಶವೂ ಇಲ್ಲದ ಆತನ ಬೋಧನೆಯೇ ಇಲ್ಲ. ಸಹಾನುಭೂತಿ ಮತ್ತು ಪರಸ್ಪರ ಪ್ರೀತಿಯೇ ಜಗತ್ತಿನ ಸಂಕಷ್ಟಗಳನ್ನು ಮೀರುವ ಬಗೆ ಎಂಬುದು ಈ ಗುರುವಿನ ಪರಮ ಉಪದೇಶ.

ಬುದ್ಧ ಅಥವಾ ಯುದ್ಧ:
ಯುದ್ಧಭೀತಿ, ಮತೀಯ ಸಂಘರ್ಷ, ಭಯೋತ್ಪಾದನೆ, ಕೋಮು ವೈಷಮ್ಯ, ಮಾರುಕಟ್ಟೆಯ ಪ್ರಲೋಭನೆ, ಹೀಗೆ ಬಗೆಬಗೆಯ ಹಿಂಸೆ ಮತ್ತು ಆತಂಕದ ನಡುವೆ ಉಸಿರುಗಟ್ಟುತ್ತಿರುವ ನಮ್ಮ ಈ ಹೊತ್ತಿನ ಜಗತ್ತಿನ ಎದುರು ಎರಡು ಆಯ್ಕೆಗಳಿವೆ; ಒಂದು ಬುದ್ಧ ಮತ್ತೊಂದು ಯುದ್ಧ.
ಶಾಂತಿ, ಸಮಾನತೆ, ಅಹಿಂಸೆ, ಪ್ರೀತಿ, ಸಹಬಾಳ್ವೆ, ಸಹಿಷ್ಣುತೆ ಮುಂತಾದ ಪ್ರಜಾಪ್ರಭುತ್ವದ ಆಶಯಗಳ ಸಂಕೇತವಾಗಿ ನಮ್ಮ ಮುಂದೆ ಬುದ್ಧನಿದ್ದಾನೆ. ದ್ವೇಷ, ಹಿಂಸೆ, ಆಕ್ರಮಣ, ಭಯ, ಸಂಘರ್ಷ, ಅಟ್ಟಹಾಸ, ಅಸಹನೆ ಮುಂತಾದ ಸರ್ವಾಧಿಕಾರಿ ಮನೋಧರ್ಮದ ಸಂಕೇತವಾಗಿ ಯುದ್ಧ ಇದೆ. ಚರಿತ್ರೆಯುದ್ದಕ್ಕೂ ಯುದ್ಧವೇ ಮನುಷ್ಯನ ಮೊದಲ ಆಯ್ಕೆಯಾಗಿದೆ. ಹಾಗಾಗಿಯೇ ಈಗಾಗಲೇ ಜಗತ್ತು ಎರಡು ಮಹಾಯುದ್ಧಗಳನ್ನು ಸೇರಿದಂತೆ ಹಲವು ಯುದ್ಧಗಳನ್ನೂ, ಅವು ಸೃಷ್ಟಿಸುವ ನರಕವನ್ನೂ ಕಂಡಿದೆ. ಆ ಅನುಭವದ ಹೊರತಾಗಿಯೂ ಜಗತ್ತು ಇದೀಗ ಮತ್ತೆ ಮೂರನೇ ಮಹಾಯುದ್ಧದ ಹೊಸ್ತಿಲಲ್ಲಿದೆ. ಯುದ್ಧೋನ್ಮಾದ ಜಗತ್ತಿನಾದ್ಯಂತ ಬೇರೆಬೇರೆ ಬಗೆಯಲ್ಲಿ ಹೆಡೆಎತ್ತಿದೆ. ಅದು ಅಮೆರಿಕ –ಉತ್ತರ ಕೊರಿಯಾದ ಸಂಘರ್ಷವಿರಬಹುದು, ರಷ್ಯಾ – ಅಮೆರಿಕದ ಮೇಲಾಟವಿರಬಹುದು, ಬುದ್ಧನ ತವರುನೆಲ ಭಾರತ- ಪಾಕಿಸ್ತಾನದ ಕತ್ತಿಮಸೆತವಿರಬಹುದು, ಪ್ಯಾಲೆಸ್ತೀನ್ ಬಿಕ್ಕಟ್ಟು, ಇರಾನ್- ಇಸ್ರೇಲ್ ಸಮಸ್ಯೆ, ಸಿರಿಯಾ- ಇರಾಕ್ ಹಿಂಸೆ,.. ಎಲ್ಲವೂ ಮತ್ತೊಂದು ಮಹಾಯುದ್ಧದ ಮುನ್ನುಡಿಯಾಗಲು ಪೈಪೋಟಿಗಿಳಿದಿವೆ.
ಈ ಹೊತ್ತಿನಲ್ಲಿ ಬುದ್ಧನ ತಾಯ್ತನದ ಪ್ರೇಮವೊಂದೇ ಜಗತ್ತನ್ನು ವಿನಾಶದಿಂದ ಪಾರು ಮಾಡಬಹುದಾದ ದಾರಿ. ಅದು ಅಂತಃಕರಣದ ಹಾದಿ ಮತ್ತು ಪ್ರೀತಿಯ ಪಯಣ. ಆತನ ಅಸೀಮ ಪ್ರೀತಿ ಯಾವ ಅಧಿಕಾರದ ಗದ್ದುಗೆಯೂ, ಸೈನ್ಯದ ಆರ್ಭಟವೂ ಮನುಕುಲಕ್ಕೆ ನೀಡಲಾಗದ ಕಾಣಿಕೆ. ಭೂಮಿಯ ಮೇಲಿನ ಅತ್ಯಂತ ನಿಕೃಷ್ಟ ಜೀವಿಯಲ್ಲಿಯೂ ಕರುಣೆ, ಪ್ರೀತಿಯನ್ನು ಹೊಂದಿದ್ದ ಬುದ್ಧನ ಕಾಣ್ಕೆಯು, ಈ ಜಗತ್ತಿನ ತುರ್ತಾಗಬೇಕಿದೆ. ಬುದ್ಧನ ಪ್ರೀತಿಯ ಮಾರ್ಗದ ಮೂಲಕ ಮನುಷ್ಯ ಜೀವನಪ್ರೀತಿ, ಮಾನವೀಯತೆ, ಕರುಣೆಯಂತಹ ಗುಣಗಳನ್ನು ಕಂಡುಕೊಳ್ಳಬಲ್ಲ ಮತ್ತು ಮತ್ತೊಬ್ಬರಿಗೆ ಕಾಣಿಸಬಲ್ಲ. ಅದೊಂದೇ ಯುದ್ಧವನ್ನು ಗೆಲ್ಲುವ ಪರಿ. ಯುದ್ಧದ ತಮಂಧದ ಕೇಡಿನಲ್ಲಿ ಕುಸಿಯುತ್ತಿರುವ ಜಗತ್ತಿಗೆ ಬುದ್ಧನೆಂಬ ಜೀವ ಬಂಧು ಹಚ್ಚಿದ ಪ್ರೀತಿಯ ಪ್ರಣತಿ ಶಾಂತಿಯ ಬೆಳಕೊಂದೇ ಆಸರೆಯಾಗಬೇಕಿದೆ. ತಮಂಧದ ಕೇಡು ಕಳೆಯಬೇಕಿದೆ.


## ತೊತ್ತೋಚಾನ್: ಒಂದು ಚಿಂತನೆ -ರಾಘವೇಂದ್ರ ಬಿ.ಬಿ

ನನಗೆ ಅನಿಸುತ್ತೆ, ಶಿಕ್ಷಣ ಅನ್ನೋದು ನಾಲ್ಕು ಗೋಡೆಯ ನಡುವಿನ ಶಾಲಾ ಕೊಠಡಿಗೆ ಸೀಮಿತವಾಗಿಬಿಟ್ಟಿದೆ. ಜ್ಞಾನ ಮತ್ತು ಕೌಶಲ್ಯಗಳನ್ನು ಮನೆಯಲ್ಲೇ ನೀಡಲು ಪ್ರಾರಂಭಿಸಬೇಕೆ? ಬಹುಶಃ ನಿತ್ಯ ಜೀವನದ ಸಂಗತಿಗಳಿಗೆ ಆಸಕ್ತಿಯಿಂದ ಮತ್ತು ಕುತೂಹಲದಿಂದ ಸ್ಪಂದಿಸುವ ಮಗುವಿನ ಸಾಮರ್ಥ್ಯಕ್ಕೆ ಗೊಡ್ಡು ಶಿಕ್ಷಣವು ನೀಡುವ ಕೊಡುಗೆಯ ಕುರುಹುವಿನಂತೆಯೇ ಪೋಷಕರ ಸ್ಪಂದನೆಯೂ ಕಾಣುತ್ತದೆ. ಆಕೆ ತನ್ನ ಕಂದನ ಕುತೂಹಲವನ್ನು ತಣಿಸುವ, ಮಗುವಿ ಪ್ರಶ್ನೆಗಳಿಗೆ ಉತ್ತರಿಸುವ, ಮಗು ಬಯಸಿದ್ದನ್ನು ಮಾಡಲು ಬಿಡಲು ಧೈರ್ಯತೋರುವ ಕಾರ್ಯದಲ್ಲಿ ಕೌಶಲ್ಯಗಳನ್ನು ಪಡೆಯಬೇಕಾಗಿದೆ ಎಂದೆನಿಸುತ್ತದೆ.

ಆದರೆ *ತೊತ್ತೋಚಾನ:ಕಿಟಕಿಯ ಬಳಿ ನಿಂತ ಪುಟ್ಟ ಹುಡುಗಿ* ಪುಸ್ತಕವನ್ನು ಓದಿದ ನಂತರ ಹೊಸದೊಂದು ಉಲ್ಲಾಸ ಮತ್ತು ಆಸಕ್ತಿ ಮನಸ್ಸಿನಲ್ಲಿ ಮೂಡಲಾರಂಭಿಸುತ್ತದೆ. ತೊತ್ತೋಚಾನಳ ತಂದೆ-ತಾಯಿಗಳು ಆಕೆಯ ಬೆಳವಣಿಗೆಗೆ ಪೂರಕವಾಗಿ ನಡೆದುಕೊಂಡಿದ್ದು, ಆ ಹುಡುಗಿಯ ಸಾಮರ್ಥ್ಯಗಳನ್ನು ಪೋಷಿಸುತ್ತಾ, ಅಸಮರ್ಥತೆಗಳನ್ನು ತೆಗಳದೇ ಆಕೆಗೆ ಮುಕ್ತವಾಗಿ ಅರಳಿ ತನ್ನೊಳಗಿಂದಲೇ ಪ್ರಗತಿಕಾಣುವ ಅವಕಾಶವನ್ನು ನೀಡಿದಂತ ಸ್ಥಳವನ್ನು ಹುಡುಕಿದ್ದು




ಎಲ್ಲವೂ ಅಮೋಘ. ಆ ಶಾಲೆ ಒಂದು ಅದ್ಭುತ ಪ್ರದೇಶ. ಆ ಶಾಲೆಗೆ ಹೋಗುವ ಅವಕಾಶ ಸಿಕ್ಕರೆ ಖಂಡಿತ ಅದನ್ನು ತಪ್ಪಿಸಿಕೊಳ್ಳಲ್ಲ. ಅದು ಅವಿಸ್ಮರಣೀಯವಾಗುವಂತದ್ದು. ತೋಮೆಯೋ ಪ್ರತಿ ಮಗುವನ್ನು ಅದರ ವಿಶಿಷ್ಠ ಸಾಮರ್ಥ್ಯಕ್ಕೆ ತಕ್ಕಂತೆ ಬೆಳಸಿದ್ದು ರೋಚಕವೆನಿಸುವಂತದ್ದು. ಅಲ್ಲಿನ ಮುಖ್ಯಗುರುಗಳಾದ ಸೋಸಾಕು ಕೊಬಯಾಶೊ ಪ್ರತಿ ಮಗುವೂ ತನ್ನಲ್ಲಿರುವ ದೌರ್ಬಲ್ಯಗಳನ್ನು ಮೆಟ್ಟಿನಿಂತು ತನ್ನದೇ ಆದ ವೇಗದಲ್ಲಿ ಬೆಳೆಯಲು ಸಮಯಾವಕಾಶ ಮತ್ತು ಸ್ಥಳಾವಕಾಶ ಮಾಡಿಕೊಟ್ಟಂತಹ ಕಲ್ಪನೆಗೂ ಸಿಗದ ವ್ಯಕ್ತಿ. ಆಯಾ ಮಕ್ಕಳ ವಿಶಿಷ್ಠ ವ್ಯಕ್ತಿತ್ವ, ಕನಸುಗಳು, ಆಕಾಂಕ್ಷೆಗಳು, ಕೌಟುಂಬಿಕ ಹಿನ್ನೆಲೆ, ಬಲ ಮತ್ತು ದೌರ್ಬಲ್ಯಗಳನ್ನು ಅರಿತು ಅವರ ಅಗತ್ಯಕ್ಕೆ ತಕ್ಕಂತೆ ಏನೆಲ್ಲಾ ಮಾಡಬಹುದು ಎಂಬುದನ್ನು ಯಾವಾಗಲೂ ಚಿಂತಿಸುವಂತ ವ್ಯಕ್ತಿ. ಅವುಗಳನ್ನು ಸವಲಾಗಿ ಸ್ವೀಕರಿಸಿ ಗೆಲ್ಲುವ ಛಾತಿ ಆತನಿಗೆ ರೂಢಿಯಾಗಿತ್ತು. ಹುಡುಕಾಟ, ಪ್ರವಾಸ, ಬೀಜಗಳ ಬಿತ್ತನೆ, ಮರ ಹತ್ತುವುದು ಅಥವಾ ನದಿ-ಕೊಳ್ಳಗಳಲ್ಲಿ ಆಡುವುದು ಇವೆಲ್ಲವುಗಳ ಮೂಲಕ ಮಕ್ಕಳು ಕಲಿಕೆಯ ಮಜಾ ಅನುಭವಿಸುತ್ತಾರೆ, ಪ್ರಕೃತಿಗೆ ಹತ್ತಿರವಾಗಿ ಎಲ್ಲವನ್ನೂ ಕಲಿಯುತ್ತಾರೆ ಎಂಬುದು ಇಲ್ಲಿ ಪ್ರಸ್ತುತವಾಗಿದೆ.




ಅತ್ಯಂತ ಆದರ್ಶಮಯವಾಗಿ ಕಾಣುವಂತಹ ಈ ಶಾಲೆಯ ಮಾದರಿಯನ್ನು ಈ ಆಧುನಿಕ ಪ್ರಪಂಚದಲ್ಲಿ ಪರಿಪೂರ್ಣವಾಗಿ ಅದೇ ಮಾದರಿಯ ಮರುಸೃಷ್ಟಿ ಅಸಾಧ್ಯವೆನಿಸುತ್ತೆ, ಆದರೆ ತೋಮೋಯೋದ ಆ ಶಿಕ್ಷಣದ ಶೈಲಿಯಿಂದ ಸಾಕಷ್ಟು ತೆಗೆದುಕೊಳ್ಳಬಹುದು ಎಂಬುದು ನನಗೆ ಓದಿನಿಂದ ಇಷ್ಟವಾದ ಸಂಗತಿ. ಮುಖ್ಯೋಪಾಧ್ಯಯರ ಕಲಿಸುವಿಕೆ ಅತ್ಯಂತ ಸರಳವೆನಿಸಿದ್ರೂ ಸಹ ಅದಕ್ಕೊಂದು ಪದ್ಧತಿ, ಚಿಂತನೆ ಇತ್ತು ಎಂಬುದು ವಿಶೇಷ. ಸಂಪೂರ್ಣವಾಗಿ ಅಸಂಪ್ರದಾಯಿಕವಾದಂತಹ ಕಲಿಕಾ ವಿಧಾನವನ್ನು ಸೊಸಾಕು ಕೊಬಯಾಶಿಯವರು ಅಳವಡಿಸಿಕೊಂಡಿದ್ದರು. ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುವುದಕ್ಕೆ ಸಂಬಂಧಿಸಿದಂತೆ ಸದಾ ಹೊಸತನವನ್ನು ಕಂಡುಕೊಳ್ಳುವ ಅವರ ಮನೋಭಾವ ನಿಜವಾಗಲೂ ಅನುಕರಣೀಯ ಅನಿಸುತ್ತದೆ. ಇದರಿಂದ ಅರ್ಥ ಆಗುವುದು ಏನೆಂದರೆ, ಕೆಲವೇ ಕೆಲವು ಜನರಾದ್ರೂ ಈ ಕ್ಷೇತ್ರಕ್ಕೆ ಅರ್ಪಿಸಿಕೊಳ್ಳದ ಹೊರತು, ಬದಲಾವಣೆ ಬಯಸೋಕೆ ಸಾಧ್ಯವಾಗೋದಿಲ್ಲ ಅನ್ನೋದು.

ಪುಸ್ತಕ ಓದಿ ಕುಳಿತಾಗ ನನಗೆ ಬಂದಂತಹ ಕೆಲವು ಮುಖ್ಯ ವಿಚಾರಗಳು ಎಂದರೆ:
ನಮ್ಮ ವಿದ್ಯಾರ್ಥಿಗಳು ಅಥವಾ ಮಕ್ಕಳು ವಿಭಿನ್ನವಾಗಿರುತ್ತಾರೆ, ವಿಶಿಷ್ಟವಾಗಿರುತ್ತಾರೆ ಎನ್ನುವುದನ್ನ ನಾವು ಅಂದರೆ ಶಿಕ್ಷಕರು ಎಷ್ಟರಮಟ್ಟಿಗೆ ಒಪ್ಪಿಕೊಳ್ಳುತ್ತೇವೆ? ಆ ಮಕ್ಕಳಿಗೆ ಅಷ್ಟೊಂದು ಸಾಮರ್ಥ್ಯವಿಲ್ಲ ಎಂದು ನಮಗೆ ನಾವೇ ಭಾವಿಸಿಕೊಂಡು ಅವರಿಗೆ 'ದಡ್ಡರು' ಎಂಬ ಹಣೆಪಟ್ಟಿ ಕಟ್ಟದೇ ಅವರ ದೈಹಿಕ, ಭಾವನಾತ್ಮಕ, ಮಾನಸಿಕ, ಸಾಮಾಜಿಕ ಹಾಗೂ ನೈತಿಕ ಮಟ್ಟಕ್ಕೆ ಅನುಗುಣವಾಗಿ ಪಾಠ ಬೋಧನೆಯನ್ನು ಯೋಜಿಸುತ್ತೀವೆಯೇ? ನಮ್ಮ ವಿದ್ಯಾರ್ಥಿಗಳು ಹಲವಾರು ಅನಿರೀಕ್ಷಿತ ಮತ್ತು ನಾವು ಯೋಚಿಸಿರದ ಪ್ರಶ್ನೆಗಳನ್ನು ಕೇಳಿದಾಗ, ಸವಾಲುಗಳನ್ನು ನಮ್ಮ ಮುಂದೆ ಹಾಕಿದಾಗ ನಾವು ಶಾಂತವಾಗಿ ಅದನ್ನು ಎದರಿಸೋದಕ್ಕೆ ಸಿದ್ಧವಾಗಿದ್ದೇವೆಯೇ? ತೊತ್ತೋಚಾನ್‌ನಂತಹ ಕೆಲವು ಮಕ್ಕಳು ಮಲವನ್ನೇ ಕೆದರುವ ಮೂಲಕ ಸರಹದ್ದುಗಳನ್ನೇ ಪರೀಕ್ಷೆಗೊಳಪಡಿಸುತ್ತಾರೆ, ಹೊಸಕೆಲಸಗಳನ್ನು ಮಾಡುತ್ತಾರೆ, ಕೆಲಸಗಳನ್ನು ಹೊಸರೀತ ಮಾಡುತ್ತಾರೆ. ಶಿಕ್ಷಕರಾಗಿ, ನಾವು ಸುಮ್ಮನೇ ನಿಂತು ನೋಡಬಲ್ಲೆವೇ, ಅಲ್ಲೂ ಸೃಜನಶೀಲತೆಯಿಂದ ಚಿಂತಿಸಿ ಗುಂಡಿಯಿಂದ (ಮ್ಯಾನ್‌ಹೋಲ್‌ನಿಂದ) ಹೊರತೆಗೆದ ಮಲದ ಕೊಚ್ಚೆಯನ್ನು ಕೊನೆಗೆ ಮತ್ತೇ ಅಲ್ಲಿಗೆ ಹಾಕಿ ಮುಚ್ಚಲು ಮಗುವಿಗೆ ತಿಳಿಸಬಲ್ಲೆವೇ. ವಿದ್ಯಾರ್ಥಿಗಳಿಗೆ ತಮ್ಮ ನಾಗರೀಕ ಮತ್ತು ಸಾಮಾಜಿಕ ಹೊಣೆಗಳನ್ನು ಒತ್ತಾಯಪೂರ್ವಕವಾಗಿ ಹಾಗೂ ಸ್ವತಃ ನಾವೇ ಯಾವ ಮೌಲ್ಯಗಳನ್ನು ಪಾಲಿಸದೇ ವಿದ್ಯಾರ್ಥಿಗಳಿಗೆ ಹೇಳುವ ಬದಲಿಗೆ ಬೇರೊಂದು ಸೃಜನಶೀಲ ವಿಧದಲ್ಲಿ ತಿಳಿಹೇಳಬಲ್ಲೆವೇ. ತೊಮೆಯೋದ ತರಗತಿಗಳಲ್ಲಿ ಪಠ್ಯದ ಅವಧಿಗಳನ್ನು ಕಟ್ಟಿಗೆಯ ನೆಲಹಾಸಿನ ಮೇಲೆ ಬರೆಯಲು ಹೇಳಲಾಗಿತ್ತು, ಆ ರೀತಿ ಬರೆಯುವುದರಿಂದ ಅದನ್ನು ಸ್ವಚ್ಚಗೊಳಿಸುವಾಗ ಅವರಿಗೆ ಕಷ್ಟವೆನಿಸತೊಡಗಿದಾಗ, ತರಗತಿಯನ್ನು ಗಲೀಜುಮಾಡದಂತೆ ತಮ್ಮೊಳಗೆ ಒಂದು ನಿರ್ಧಾರಮಾಡಿಕೊಳ್ಳುವಂತಾಯಿತು. ಸ್ವಚ್ಛತೆಯೆಂಬ ಮೌಲ್ಯದ ಅರಿವಾಯಿತು. ಗಲೀಜು ಮಾಡುವುದರಿಂದ ಅದನ್ನು ಸ್ವಚ್ಚಗೊಳಿಸುವ ವ್ಯಕ್ತಿಗೆ ಎಷ್ಟು ಕಷ್ಟವಾಗುತ್ತದೆ ಎಂಬುದು ಮನದೊಳಗೆ ಮೂಡಿತ್ತು. ತೊಮೆಯೋ ಶಾಲೆ ಒಂದು ಮಾದರಿ ಶಾಲೆ, ಆ ಶಾಲೆಯಂತೆ ಎಲ್ಲಾ ಶಾಲೆಗಳು ಹಾಗೂ



ಅಲ್ಲಿನ ಮುಖ್ಯೋಪಾಧ್ಯಾಯ ಸೋಸಾಕು ಕೊಬಯಾಶಿಯವರಂತೆ ಎಲ್ಲರೂ ಆಗಲಿಕ್ಕಿಲ್ಲ, ಆದ್ರೆ ನಮ್ಮದೇ ಆದ ಹೊಸತನಗಳ ಮೂಲಕ, ಅಭ್ಯಾಸಗಳ ಮೂಲಕ ನಾವು ಕೂಡಾ ತೀಕ್ಷ್ಣಮತಿಗಳಾಗಲು ಸಾಧ್ಯವಿಲ್ಲವೇ? ಶಿಕ್ಷಣದ ಗುರಿಗಳನ್ನು ಇಡೇರಿಸಿಕೊಳ್ಳಲಾಗದೇ? ಸಾಧ್ಯವಿದೆ ಎಂಬ ನಂಬಿಕೆ ಶುರುವಾಗಿದೆ.

## ಮುಖವಾಡ- ಭಾವನೆಗಳ ಬೆನ್ನೇರಿ... - ಶ್ರೀನಿವಾಸ ರಾವ್ ಎಸ್.ಪಿ ಕಲಬುರಗಿ

ಕಾಡಬೇಕಿದೆ ಮೊಗವ....
ಕಾಣಬೇಕಿದೆ ಮೊಗವ....
ಕಾಡಬೇಕಿದೆ ಜಗವ....
ಕಾಣಬೇಕಿದೆ ಜಗವ..
ಮರೆಮಾಚಿದ ಮುಖವ...!!!
ಅದರಾಚೆಯ ಮುಖವ...???

ಅದೆಷ್ಟೋ ದಿನಗಳಿಂದ ಕಾಡಿದ ಕನಸು..
ಇಂದು ನನಸಾಗಿಸಲು ಬಯಸಿತೀ ಮನಸು...
ಕಾಡಿದ ಮುಖವ ಪರಿತಪಿಸಿ, ಹಸಿದು-ಹಂಬಲಿಸಿ
ಕಾದ ಪ್ರೀತಿಯ ವೇದನೆಯ ನೋವನದುಮಿ
ನೊಡಬಂದಾಗ ಕಂಡಿತಿಂದಿಗೂ ನಾನರಿಯಲಾರದ
ಕವಲೊಡೆದ 'ಮುಖ'ವಾಡದದಾರಿ...!!!???

ಎಡಕ್ಕುಳಿದವರ ನೋಟ, ಬಲಕ್ಕುಳಿದವರ ನೊಟ..
ಉರುಳಿ ಬೀಳುವ ಆಟ, ಬಿದ್ದು ಏಳುವ ಕಾಟ..!!??
ಆಟ-ನೊಟದ ಚಿಂತೆ, ಬಸವಳಿದ ಸಂತೆ..
ಸಂತೆ ಮಧ್ಯದಿ ಕುಂತೆ, ಬೆಂಬಿಡದ ಚಿತೆಯ-ಚಿಂತೆ..!!??
ಕಂತು-ಕಂತಿನ ಚಿಂತೆ, ಮುಖವಾಡದ ಸಂತೆ...
ಚಲಿಸಬೇಕಿದೆ ಸಂತೆ.. ಸವೆಯಬೇಕಿದೆ ಚಿಂತೆ...
ಸಾಗಬೇಕಿದೆ ಕರ್ಮ.. ಕಾಣಬೇಕಿದೆ ಧರ್ಮ...
ಇದು 'ಮುಖ'ವಾಡದ ಮರ್ಮ...!!!???

ಕೇಳಬೇಕ ಪ್ರಶ್ನೆ..
ಕಂಡು-ಕಾಡಿದ ಪ್ರಶ್ನೆ..??
'ಕಾಡು' ಕಡಿದ ಮೇಲೆ..
'ಕಾಲ' ಕೇಳುವ ಪ್ರಶ್ನೆ..!!??
'ಮುಖ'ವಾಗಿಸಿತೆ..?? ಮುಖವಾಡವ.. ಈ ಪ್ರಶ್ನೆ...???
ಇದು 'ಮುಖ'ವಾಡದ ಪ್ರಶ್ನೆ...!!!???
ಇದು 'ಮುಖ'ವಾಡದ ಪ್ರಶ್ನೆ...!!!???



## Reflections- Malavika Rajnarayan Yadgir

For the first week or so after moving into the new school premises, we found the children to be most excited about one place on the campus. The washrooms. There was a steady flow of children visiting the washrooms through class hours and they looked forward to the breaks with a heightened sense of enthusiasm. We soon found out that their excitement about the washrooms was because of the large mirrors that have been placed there.



There is peculiar wonderment in looking at reflections, even when it isn't our own. As a child, I used to always wonder what it would be like to enter the world on the other side of the mirror and live there, even though I knew it wasn't very different from where I lived. It was still a flipped version, like how a dress would still fit the same when worn inside-out. The funny thing about looking into the mirror is that it shows us how we look flipped, while in fact the world doesn't see us that way. So, it is equally amusing for us to see others in a mirror. And so, many minutes must be passing by in front of the mirrors in the washrooms, in grooming and adjusting hair, face and clothes.

Reflections trigger very interesting thought-processes within us. They makes us self-aware on the one hand, but they also makes us aware of other ways of seeing. The real fun begins when someone throws a tiny pebble in still waters and every image that we see reflected, begins to move.




Art by: Rajani Bhat Ballari





Art by:  Gargi N Shabaray








PC: SHIVUKUMAR C.S .I-LKAL

**TEAM *FA-TALKIES***

| | | | |
|---|---|---|---|
| 1 | Raghavendra.BT | raghavendra.bt@azimpremjifoundation.org | 9036463505 |
| 2 | Santosh Diksangi | santoshkumar.diksangi@azimpremjifoundation.org | 9019679673 |
| 3 | Lohitha HN | lohitha.n@azimpremjifoundation.org | 9008936789 |
| 4 | Vijayashree | vijayashree.ps@azimpremjifoundation.org | 9108785756 |
| 5 | Chitra P | chithra.p@azimpremjifoundation.org | 7899908166 |
| 6 | Shivakumar CS | shivakumara.cs@azimpremjifoundation.org | 9019396224 |
| 7 | Manjunatha A.R | manjunatha.ar@azimpremjifoundation.org | 8123057135 |

***Cover Page by: Raghavendra BT***

